Final copy 1

ಕರ್ನಾಟಕ ಸರ್ಕಾರ

ಅಪರ ನಿರ್ದೇಶಕರು,

ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ,

ಪ್ರಾಂತೀಯ ಕಛೇರಿ ಕಲಬುರಗಿ.

# 2019-20 & 2020-21ನೇ ಸಾಲಿನ ಲೆಕ್ಕಪರಿಶೋಧನಾ ಅಂತಿಮ ವರದಿ.

## ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ

## “ತುಂಗಭದ್ರ ಕಾಡಾ ಮುನಿರಾಬಾದ್”

ಜಿ|| ಕೊಪ್ಪಳ

# ತುಂಗಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ

Office of the Administrator,
Tungabhadra Project,
Command Area Development Authority,
Munirabad-583233
Taluk & District : Koppal.
E-mail : cadadepartment@gmail.com

ಆಡಳಿತಾಧಿಕಾರಿಗಳ ಕಛೇರಿ,
ತುಂಗಭದ್ರಾ ಯೋಜನೆ
ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ
ಮುನಿರಾಬಾದ-583233 ತಾ॥ ಜಿ॥ಕೊಪ್ಪಳ.
ದೂರವಾಣಿ ಸಂಖ್ಯೆ : 08539-270332
ಇ-ಮೇಲ್ : cadadepartment@gmail.com


ಸಂಖ್ಯೆ:ಕಾಡಾ/ಟಿಬಿಪಿಮು/2022-23/ ದಿನಾಂಕ: 11.7.2022

## ಪೂರಕ ಟಿಪ್ಪಣಿ

### 2019-2020 ಮತ್ತು 2020-2021:-

2019-20 ಹಾಗೂ 2020-21ನೇ ಸಾಲಿನ ಲೆಕ್ಕ ತನಿಖೆ ದಿನಾಂಕ:17-1-2022 ರಿಂದ 05-02-2022ರವರೆಗೆ ಕೈಗೊಳ್ಳಲಾಗಿದ್ದು, ದಿನಾಂಕ:25-05-2022 ರಂದು ಬಿಡುಗಡೆಯಾಗಿರುತ್ತದೆ. ಸದರಿ ವರದಿಯು ಜೂನ್-2022ರ ಅಂತ್ಯಕ್ಕೆ ಸ್ವೀಕೃತವಾಗಿರುತ್ತದೆ. ಸದರಿ ವರದಿಯ ಅಚ್ಚು ಪ್ರತಿಗಳನ್ನು ದಿನಾಂಕ:11-07-2022 ರಂದು ಸರ್ಕಾರಕ್ಕೆ ಸಲ್ಲಿಸಲಾಗಿದೆ.

ಈ ಹಿಂದಿನ ವರ್ಷಗಳಲ್ಲಿ ಲೆಕ್ಕಪತ್ರ ಸಂಬಂಧ ನಿಯಮಿತವಾಗಿ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ನಿಯೋಜನೆಯಾಗಿರುವುದಿಲ್ಲ ಹಾಗೂ ಈ ಅವಧಿಯಲ್ಲಿ ಲೆಕ್ಕಪತ್ರ ಸಿಬ್ಬಂದಿಗಳ ತ್ರೀವ ಕೊರತೆಯೂ ಆಗಿರುವುದರಿಂದ ವರದಿಗಳನ್ನು ಸಕಾಲದಲ್ಲಿ ಸಲ್ಲಿಸಲು ಸಾಧ್ಯವಾಗಿರುವುದಿಲ್ಲ. ಈ ಮೇಲಿನ ಲೆಕ್ಕಪರಿಶೋಧನಾ ವರದಿಗಳನ್ನು ಪ್ರಸ್ತುತವಾಗಿ ಕಾಡಾ ನಿರ್ದೇಶನಾಲಯಕ್ಕೆ ಹಾಗೂ ಸರ್ಕಾರಕ್ಕೆ 11.7.2022ರಂದು ಸಲ್ಲಿಸಲಾಗಿದೆ. ಭವಿಷತ್ತಿನಲ್ಲಿ ನಿಗದಿತ ಸಮಯದಲ್ಲಿ ಆಡಿಟ್ ವರದಿಗಳನ್ನು ಸಲ್ಲಿಸಲು ಕ್ರಮವಹಿಸಲಾಗುವುದು. ದಯವಿಟ್ಟು 2019-21ನೇ ಸಾಲಿನ ಲೆಕ್ಕತನಿಖಾ ವರದಿಯನ್ನು ಅಂಗೀಕರಿಸಲು ಕೋರಿದೆ.

ಆಡಳಿತಾಧಿಕಾರಿಗಳು,
ಕಾಡಾ ಟಿಬಿಪಿ ಮುನಿರಾಬಾದ್.

OFFICE OF THE ADDITIONAL DIRECTOR,
KARNATAKA STATE AUDIT & ACCOUNTS DEPARTMENT,
REGIONAL OFFICE,
1ST FLOOR PLOT NO. 126/A44,
DARSHNAPUR, GDA LAYOUT,
SANTRASWADI,
KALABURAGI-585 101
E-mail: roauditklb@gmail.com

ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ

ಅಪರ ನಿರ್ದೇಶಕರ ಕಛೇರಿ,
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಪ್ರಾಂತೀಯ ಕಛೇರಿ,
1ನೇ ಮಹಡಿ ಪ್ಲಾಟ್ ನಂ. 126/ಎ44,
ದರ್ಶನಾಪೂರ ಜಿ.ಡಿ.ಎ. ಲೇಔಟ್ ಸಂತ್ರಸವಾಡಿ,
ಕಲಬುರಗಿ-585101
ಇ-ಮೇಲ್: roauditklb@gmail.com

ಸಂಖ್ಯೆ:ಪ್ರಾಕಕ/ಆಡಳಿತ/ಟಿ.ಬಿ.ಪಿ./ಕಾಡಾ/ಲೆಪವಬಿ-2019-21/2022-23/133 ದಿನಾಂಕ: 25/5/2022

ಇವರಿಗೆ,

ಆಡಳಿತಧಿಕಾರಿಗಳು,
ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾಗ,
ತುಂಗಭದ್ರ ಕಾಡಾ ಮುನಿರಾಬಾದ್.
**ಜಿ|| ಕೊಪ್ಪಳ.**

44
16/6/2022

**ಮಾನ್ಯರೆ,**

**ವಿಷಯ:-** 2019-20 ಮತ್ತು 2020-21ನೇ ಸಾಲಿನ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ತುಂಗಭದ್ರಾ (ಕಾಡಾ) ಮುನಿರಾಬಾದ್ ಲೆಕ್ಕಪರಿಶೋಧನಾ ಅಂತಿಮ ವರದಿ ಬಿಡುಗಡೆ ಮಾಡುವ ಬಗ್ಗೆ.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ತುಂಗಭದ್ರಾ (ಕಾಡಾ) ಮುನಿರಾಬಾದ್. ಕಛೇರಿಯ 2019-20 ಮತ್ತು 2020-21ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನೆಯನ್ನು ಕೈಗೊಂಡು ದಿನಾಂಕ:22-04-2022 ರಂದು ಪುನರ್ ಪರಿಶೀಲನೆ ಮಾಡಿ ಅಂತಿಮ ವರದಿಯನ್ನು ಬಿಡುಗಡೆಗೊಳಿಸಲಾಗಿದೆ.

ತಮ್ಮ ವಿಶ್ವಾಸಿ,

**ಅಡಕ** : 2019-20 & 2020-21ನೇ ಸಾಲಿನ ಅಂತಿಮ ಲೆಕ್ಕಪರಿಶೋಧನಾ ವರದಿ.

ಅಪರ ನಿರ್ದೇಶಕರು
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ.
ಪ್ರಾಂತೀಯ ಕಛೇರಿ ಕಲಬುರಗಿ.

13 JUN 2022

Administrator
Date 264 14-6-22
CADA-TBP, MUNIRABAD

16 JUN 2022

2

## ತುಂಗಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ (ಕಾಡಾ) ಮುನಿರಾಬಾದ 2019-20 & 2020-21ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ.

1) **ಪೀಠಿಕೆ** :-

ಕರ್ನಾಟಕ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಕಾಯ್ದೆ 1980 ಸೆಕ್ಷನ್ 24(2)ರ ಪ್ರಕಾರ ತುಂಗಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಮುನಿರಾಬಾದ್ 2019-20 & 2020-21ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ಕೈಗೊಂಡು ವರದಿಯನ್ನು ಬಿಡುಗಡೆ ಮಾಡಲಾಗಿದೆ.

2) **ಸಾಮಾನ್ಯ ಮಾಹಿತಿ** :-

| | | | |
|---|---|---|---|
| 1) | **ಸಂಸ್ಥೆಯ ಹೆಸರು** | : | ತುಂಗಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ (ಕಾಡಾ) ಮುನಿರಾಬಾದ |
| 2) | **ಲೆಕ್ಕ ಪರಿಶೋಧನಾ ಅವಧಿ** | : | 01-04-2019 ರಿಂದ 31-03-2021 |
| 3) | **ಲೆಕ್ಕ ಪರಿಶೋಧನಾ ತಂಡ** | A | **ಲೆಕ್ಕಪರಿಶೋಧನಾಧಿಕಾರಿಗಳು:**<br>1. ಶ್ರೀ ಪವನಕುಮಾರ<br>2. ಶ್ರೀಮತಿ ಸರೋಜಾ.ಸಿ.ಬೆಳಮಗಿ |
| | | B | **ಲೆಕ್ಕ ಸಹಾಯಕರು:**<br>1. ಶ್ರೀ ಸೂರ್ಯಕಾಂತ ಆರ್. ಜುಮ್ಮಣ್ಣ<br>2. ಶ್ರೀ ಪ್ರಶಾಂತಕುಮಾರ<br>3. ಕು॥ ಶಬಾನಾ<br>4. ಶ್ರೀ ಯಲ್ಲಪ್ಪ<br>5. ಶ್ರೀ ಬಸವಂತ<br>6. ಕು॥ ಅಂಜಲಿ |
| 4) | **ಲೆಕ್ಕಪರಿಶೋಧನಾ ಪ್ರಾರಂಭ ದಿನಾಂಕ** | : | 17-01-2022 |
| 5) | **ಲೆಕ್ಕಪರಿಶೋಧನಾ ಮುಕ್ತಾಯ ದಿನಾಂಕ** | : | 05-02-2022 |
| 6) | **ಲೆಕ್ಕಪರಿಶೋಧನೆಗೆ ಉಪಯೋಗಿಸಿರುವ ಮಾನವ ದಿನಗಳು** | : | 120 ಮಾನವ ದಿನಗಳು |
| 7) | **ಪುನರ್ ಪರಿಶೀಲನಾಧಿಕಾರಿಗಳ ಹೆಸರು ಮತ್ತು ಹುದ್ದೆ** | : | ಶ್ರೀ ಬನ್ನಪ್ಪ ಜೆ ಗುಡಿಮನಿ<br>ಅಪರ ನಿರ್ದೇಶಕರು<br>ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ,<br>ಪ್ರಾಂತೀಯ ಕಛೇರಿ ಕಲಬುರಗಿ. |
| 8) | **ಪುನರ್ ಪರಿಶೀಲನೆ ಮಾಡಿದ ದಿನಾಂಕ** | : | 22-04-2022 |
| 9) | **ವಾರ್ಷಿಕ ಲೆಕ್ಕಪತ್ರ ಸಲ್ಲಿಸಿದ ದಿನಾಂಕ** | : | 03-09-2021 (2019-20)<br>11-01-2022 (2020-21) |

## 2019-20 & 2020-21ನೇ ಸಾಲಿನಲ್ಲಿ ಪ್ರಾಧಿಕಾರದಲ್ಲಿ ಕಾರ್ಯನಿರ್ವಹಿಸಿದ ಅಧಿಕಾರಿಗಳ ಹೆಸರುಗಳು

| ಕ್ರಮ ಸಂಖ್ಯೆ | ಅಧಿಕಾರಿಗಳ ಹೆಸರು : ಹುದ್ದೆ (ಶ್ರೀಯುತರು) | ರಿಂದ | ವರೆಗೆ |
|---|---|---|---|
| I | ಅಧ್ಯಕ್ಷರು: | | |
| 1) | ಶ್ರೀ ಡಿ.ಕೆ. ಶಿವಕುಮಾರ (ಮಾನ್ಯ ಜಲಸಂಪನ್ಮೂಲ ಸಚಿವರು) | 01-04-2019 | 02-08-2019 |
| 2) | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಜಲಸಂಪನ್ಮೂಲ ಇಲಾಖೆ) | 03-08-2019 | 03-11-2019 |
| 3) | ಶ್ರೀ ಆರ್. ಬಸನಗೌಡ ತುರವಿಹಾಳ | 04-11-2019 | 29-11-2020 |
| 4) | ಶ್ರೀ ತಿಪ್ಪೇರುದ್ರಸ್ವಾಮಿ ಬಿ.ಹೆಚ್.ಎಂ | 30-11-2020 | 31-03-2021 |
| | | | |
| II | ಆಡಳಿತಾಧಿಕಾರಿಗಳು: | | |
| 1) | ಶ್ರೀ ಸೈಯದ್ ಇಸಾಕ್ ಅಪ್ಸರ ಎಂ.ಬಿ. | 01-04-2019 | 01-09-2020 |
| 2) | ಶ್ರೀ ಬಿ.ಆರ್. ಅನಿಲಕುಮಾರ್ | 02-09-2020 | 31-03-2021 |
| | | | |
| III | ಭೂ ಅಭಿವೃದ್ಧಿ ಅಧಿಕಾರಿ (ತಾಂತ್ರಿಕ) | | |
| 1) | ಶ್ರೀ ವಲೀಷಾ (ಪ್ರಭಾರ) | 01-04-2019 | 04-12-2019 |
| 2) | ಶ್ರೀ ಟಿ. ಲಕ್ಷ್ಮಪ್ಪ | 05-12-2019 | 31-03-2020 |
| 3) | ಶ್ರೀ ವಲೀಷಾ (ಪ್ರಭಾರ) | 01-04-2020 | 21-10-2020 |
| 4) | ಶ್ರೀ ಎಸ್. ಎಂ. ಧನವಾಡಕರ್ | 22-10-2020 | 17-11-2020 |
| 5) | ಶ್ರೀ ವಲೀಷಾ (ಪ್ರಭಾರ) | 17-11-2020 | 27-11-2020 |
| 6) | ಶ್ರೀ ಎಸ್. ಎಂ. ಧನವಾಡಕರ್ | 27-11-2020 | 30-11-2020 |
| 7) | ಶ್ರೀ ವಲೀಷಾ (ಪ್ರಭಾರ) | 01-12-2020 | 22-12-2020 |
| 8) | ಶ್ರೀಮತಿ ಆರ್. ಸಂಧ್ಯಾಕುಮಾರಿ | 23-12-2020 | 31-03-2021 |
| | | | |
| IV | ಭೂ ಅಭಿವೃದ್ಧಿ ಅಧಿಕಾರಿ (ಕೃಷಿ) | | |
| 1) | ಶ್ರೀ ವಲೀಷಾ (ಪ್ರಭಾರ) | 01-04-2019 | 30-11-2019 |
| 2) | ಶ್ರೀ ಶ್ರೀನಿವಾಸ ಚಿಂತಾಲ | 01-12-2019 | 23-07-2020 |
| 3) | ಶ್ರೀ ವಲೀಷಾ (ಪ್ರಭಾರ) | 24-07-2020 | 31-03-2020 |
| 4) | ಸೈಯದ್ ಶಂಷಾಲಂ ಹುಸೇನಿ (ಪ್ರಭಾರ) | 01-04-2020 | 31-03-2021 |
| | | | |
| V | ಭೂ ಅಭಿವೃದ್ಧಿ ಅಧಿಕಾರಿ (ಸಹಕಾರ) | | |
| 1) | ಶ್ರೀ ಎಸ್.ಕೆ. ಸಿದ್ನೆಕೊಪ್ಪ (ಪ್ರಭಾರ) | 01-04-2019 | 31-07-2019 |
| 2) | ಶ್ರೀ ಮನೋಹರ್ (ಪ್ರಭಾರ) | 01-08-2019 | 31-12-2019 |

| ಕ್ರಮ ಸಂಖ್ಯೆ | ಅಧಿಕಾರಿಗಳ ಹೆಸರು : ಹುದ್ದೆ (ಶ್ರೀಯುತರು) | ರಿಂದ | ವರೆಗೆ |
|---|---|---|---|
| 3) | ಶ್ರೀ ಶ್ರೀನಿವಾಸ ಚಿಂತಾಲ (ಪ್ರಭಾರ) | 01-01-2020 | 23-07-2020 |
| 4) | ಶ್ರೀ ಬಿ. ಸತಿಶ ಸಂ.ಇಂ (ಪ್ರಭಾರ) | 24-07-2020 | 31-03-2021 |
| | | | |
| **VI** | **ಉಪ ಆಡಳಿತಾಧಿಕಾರಿಗಳು:** | | |
| 1) | ಶ್ರೀ ವಿ.ಜಿ.ಪಾಟೀಲ್ | 01-04-2019 | 31-03-2021 |
| | | | |
| **VII** | **ಮುಖ್ಯ ಲೆಕ್ಕಾಧಿಕಾರಿಗಳು** | | |
| 1) | ಶ್ರೀ ಬಿ. ಸುಧಾಕರ (ಪ್ರಭಾರ) | 01-04-2019 | 31-05-2019 |
| 2) | ಶ್ರೀ ವಿ. ಜಿ. ಪಾಟೀಲ್ (ಪ್ರಭಾರ) | 01-06-2019 | 31-10-2019 |
| 3) | ಶ್ರೀಮತಿ ಪದ್ಮಾವತಿ | 01-11-2019 | 29-02-2020 |
| 4) | ಶ್ರೀ ವಿ. ಜಿ. ಪಾಟೀಲ್ (ಪ್ರಭಾರ) | 01-03-2020 | 10-02-2021 |
| 5) | ಶ್ರೀ ಖಾಜಾ ಹುಸೇನ್ | 11-02-2021 | 31-03-2021 |
| | | | |
| **VIII** | **ಕಾರ್ಯನಿರ್ವಾಹಕ ಅಭಿಯಂತರರು** | | |
| 1) | ಶ್ರೀ ವಲೀಷಾ | 01-04-2019 | 31-01-2021 |
| 2) | ಸೈಯದ್ ಶಂಷಾಲಂ ಹುಸೇನಿ (ಪ್ರಭಾರ) | 01-02-2021 | 31-03-2021 |
| **IX** | **ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಮುನಿರಾಬಾದ್** | | |
| 1) | ಶ್ರೀ ಸತೀಶ (ಪ್ರಭಾರ) | 01-04-2019 | 24-07-2020 |
| 2) | ಶ್ರೀಮತಿ ಟಿ. ಸಾಯಿಸ್ವಾತಿರಾಣಿ | 24-07-2020 | 27-10-2020 |
| 3) | ಶ್ರೀ ಎಲ್. ಧರ್ಮರಾಜ ಸ.ಇಂ. (ಪ್ರಭಾರ) | 28-10-2020 | 31-03-2021 |
| | | | |
| **X** | **ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಬಳ್ಳಾರಿ** | | |
| 1) | ಶ್ರೀ ಎಸ್.ಚಂದ್ರಶೇಖರ್ | 01-04-2019 | 13-12-2019 |
| 2) | ಶ್ರೀಮತಿ ಎಸ್. ಕೆ ವೀಣಾ | 13-12-2019 | 31-03-2021 |
| | | | |
| **XI** | **ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಸಿಂಧನೂರು** | | |
| 1) | ಶ್ರೀ ಸೈಯದ್ ಷಂಷಾಲಂ ಹುಸೇನಿ | 01-04-2019 | 31-03-2021 |
| | | | |
| **XII** | **ಸಹಾಯಕ ಕೃಷಿ ನಿರ್ದೇಶಕರು** | | |
| 1) | ಶ್ರೀ ಕೆ.ರೇವಣಸಿದ್ದಪ್ಪ (ಪ್ರಭಾರ) | 01-04-2019 | 17-09-2019 |
| 2) | ಶ್ರೀ ಗೊಂದಿ ಮಂಜುನಾಥ | 18-09-2019 | 23-12-2019 |

| ಕ್ರಮ ಸಂಖ್ಯೆ | ಅಧಿಕಾರಿಗಳ ಹೆಸರು : ಹುದ್ದೆ (ಶ್ರೀಯುತರು) | ರಿಂದ | ವರೆಗೆ |
|---|---|---|---|
| 3) | ಶ್ರೀ ಬಿ. ಸತೀಶ (ಪ್ರಭಾರ) | 24-12-2019 | 31-03-2020 |
| 4) | ಶ್ರೀ ರೇವಣಸಿದ್ದಪ್ಪ ಕೃ.ಅ (ಪ್ರಭಾರ) | 01-04-2020 | 31-03-2021 |
| | | | |
| XIII | **ಕೃಷಿ ಅಧಿಕಾರಿಗಳು, ಕಾಡಾ ಬಳ್ಳಾರಿ** | | |
| 1) | ಶ್ರೀ ಎಸ್. ಚಂದ್ರಶೇಖರ್ | 01-04-2019 | 13-12-2019 |
| 2) | ಶ್ರೀ ಚಂದ್ರಶೇಖರ್ (ಪ್ರಭಾರ) | 13-12-2019 | 31-03-2021 |
| | | | |
| XIV | **ಕೃಷಿ ಅಧಿಕಾರಿಗಳು, ಕಾಡಾ ಕುರುಗೋಡು** | | |
| 1) | ಶ್ರೀ ಎಸ್. ಚಂದ್ರಶೇಖರ್ | 01-04-2019 | 13-12-2019 |
| 2) | ಶ್ರೀ ಚಂದ್ರಶೇಖರ್ | 13-12-2019 | 31-03-2021 |
| | | | |
| XV | **ಕೃಷಿ ಅಧಿಕಾರಿಗಳು, ಕಾಡಾ ಸಿಂಧನೂರು** | | |
| 1) | ಶ್ರೀ ಕೆ. ರೇವಣಸಿದ್ದಪ್ಪ | 01-04-2019 | 31-03-2021 |
| | | | |
| XVI | **ಕೃಷಿ ಅಧಿಕಾರಿಗಳು, ಕಾಡಾ ಮಾನ್ವಿ** | | |
| 1) | ಶ್ರೀ ರೇವಣಸಿದ್ದಪ್ಪ (ಪ್ರಭಾರ) | 01-04-2019 | 31-03-2021 |
| XVII | **ಸಹಕಾರ ಸಂಘಗಳ ಸಹಾಯಕ ನಿಬಂಧಕರು ಮುನಿರಾಬಾದ್** | | |
| 1) | ಶ್ರೀ ಸಾಳೇರ ತಿಮ್ಮಣ್ಣ | 01-04-2019 | 16-08-2019 |
| 2) | ಶ್ರೀ ರಮೇಶ (ಪ್ರಭಾರ) | 17-08-2019 | 31-03-2020 |
| 3) | ಶ್ರೀ ಎಲ್. ಧರ್ಮರಾಜ ಸ.ಇಂ. (ಪ್ರಭಾರ) | 01-04-2020 | 20-07-2020 |
| 4) | ಶ್ರೀ ದಸ್ತಗಿರ ಅಲಿ | 21-07-2020 | 31-03-2021 |
| | | | |
| XVIII | **ಸಹಕಾರ ಸಂಘಗಳ ಸಹಾಯಕ ನಿಬಂಧಕರು ಬಳ್ಳಾರಿ** | | |
| 1) | ಶ್ರೀ ಸಾಳೇರ ತಿಮ್ಮಣ್ಣ | 01-04-2019 | 16-08-2019 |
| 2) | ಶ್ರೀ ರಮೇಶ (ಪ್ರಭಾರ) | 17-08-2019 | 14-07-2020 |
| 3) | ಶ್ರೀ ಚಂದ್ರಶೇಖರ್ (ಪ್ರಭಾರ) | 15-07-2020 | 31-03-2021 |
| | | | |
| XIX | **ಸಹಕಾರ ಸಂಘಗಳ ಸಹಾಯಕ ನಿಬಂಧಕರು ಕುರುಗೋಡು** | | |
| 1) | ಶ್ರೀ ರಮೇಶ | 01-04-2019 | 14-07-2020 |
| 2) | ಶ್ರೀ ಚಂದ್ರಶೇಖರ (ಪ್ರಭಾರ) | 15-07-2020 | 15-02-2021 |
| 3) | ಶ್ರೀ ಸಿದ್ದರಾಮೇಶ್ವರ ಸ್ವಾಮಿ ಹಿರೇಮಠ | 16-02-2021 | 31-03-2021 |
| | | | |

| ಕ್ರಮ ಸಂಖ್ಯೆ | ಅಧಿಕಾರಿಗಳ ಹೆಸರು : ಹುದ್ದೆ (ಶ್ರೀಯುತರು) | ರಿಂದ | ವರೆಗೆ |
|---|---|---|---|
| **XX** | **ಸಹಕಾರ ಸಂಘಗಳ ಸಹಾಯಕ ನಿಬಂಧಕರು ಸಿಂಧನೂರು** | | |
| 1) | ಶ್ರೀ ಮನೋಹರ್ (ಪ್ರಭಾರ) | 01-04-2019 | 31-03-2020 |
| 2) | ಶ್ರೀ ರೇವಣ್ಣ ಸಿದ್ದಪ್ಪ (ಪ್ರಭಾರ) | 01-04-2020 | 31-03-2021 |
| | | | |
| **XXI** | **ಸಹಕಾರ ಸಂಘಗಳ ಸಹಾಯಕ ನಿಬಂಧಕರು ಮಾನ್ವಿ** | | |
| 1) | ಶ್ರೀ ಮನೋಹರ್ | 01-04-2019 | 31-12-2019 |
| 2) | ಶ್ರೀ ರೇವಣ್ಣ ಸಿದ್ದಪ್ಪ (ಪ್ರಭಾರ) | 01-01-2020 | 31-03-2021 |
| | | | |
| **XXII** | **ಸಹಕಾರ ಸಂಘಗಳ ಸಹಾಯಕ ನಿಬಂಧಕರು ವಡ್ಡರಹಟ್ಟಿ** | | |
| 1) | ಶ್ರೀ ರಮೇಶ (ಪ್ರಭಾರ) | 01-04-2019 | 14-07-2019 |
| 2) | ಶ್ರೀ ರೇವಣ್ಣ ಸಿದ್ದಪ್ಪ (ಪ್ರಭಾರ) | 15-07-2019 | 31-03-2021 |

**3) ಪ್ರಾಧಿಕಾರದ ಆರ್ಥಿಕ ಪರಿಸ್ಥಿತಿ :-**

**2019-20 ಮತ್ತು 2020-21**ನೇ ಸಾಲಿನ ಕಾಡಾ ಮುನಿರಾಬಾದ ಪ್ರಾಧಿಕಾರದ ಆರ್ಥಿಕ ಪರಿಸ್ಥಿತಿ ಈ ಕೆಳಗಿನಂತಿರುತ್ತದೆ.

(ರೂ. ಗಳಲ್ಲಿ)

| ಕ್ರ. ಸಂ | ವಿವರ | 2019-20 | 2020-21 |
|---|---|---|---|
| 1. | ಆರಂಭಿಕ ಶಿಲ್ಕು | 5,50,35,638.00 | 2,90,96,788.00 |
| 2. | ಒಟ್ಟು ಸ್ವೀಕೃತಿಗಳು | 21,39,60,701.00 | 13,65,67,882.00 |
| 3. | ಒಟ್ಟು ಮೊತ್ತ | **26,89,96,339.00** | **16,56,64,670.00** |
| 4 | ಖರ್ಚುಗಳು | 23,98,99,551.00 | 10,84,22,201.00 |
| 5 | ಅಂತಿಮ ಶಿಲ್ಕು | **2,90,96,788.00** | **5,72,42,469.00** |

ಲೆಕ್ಕ ಶೀರ್ಷಿಕೆ 2705 & 4705 ಗಳಲ್ಲಿ 2019-20 ಸಾಲಿನಲ್ಲಿ ಒಟ್ಟು ರೂ. 21,39,60,701.00 ಗಳ ಮೊತ್ತ ಸ್ವೀಕೃತಿಯಾಗಿರುತ್ತದೆ ಇದರಲ್ಲಿ ರೂ.20,85,50,000.00/-ಗಳು ಸರ್ಕಾರದಿಂದ ಬಿಡುಗಡೆಯಾದ ಅನುದಾನ (ವಿವರ **ಅನುಬಂಧ-1ರಲ್ಲಿ** ಲಗತ್ತಿಸಿದೆ) ಮತ್ತು 2020-21 ನೇ ಸಾಲಿನಲ್ಲಿ ಒಟ್ಟು ರೂ.13,65,67,882.00 ಗಳ ಮೊತ್ತ ಸ್ವೀಕೃತಿಯಾಗಿರುತ್ತದೆ ಇದರಲ್ಲಿ ರೂ. 13,24,78,000.00 ಗಳು ಸರ್ಕಾರದಿಂದ ಬಿಡುಗಡೆಯಾದ ಅನುದಾನವು ಸಹ ಒಳಗೊಂಡಿರುತ್ತದೆ. (ವಿವರ **ಅನುಬಂಧ-1ರಲ್ಲಿ** ಲಗತ್ತಿಸಿದೆ.)

4) <u>ಲೆಕ್ಕ ಪರಿಶೋಧನಾ ಶುಲ್ಕದ ಬಗ್ಗೆ :</u>

ತುಂಗಭದ್ರ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ (ಕಾಡಾ) ಮುನಿರಾಬಾದ ಇದರ 2018-19ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ಈ ಕೆಳಗಿನಂತೆ 08 ಜನ ಲೆಕ್ಕ ತನಿಖಾ ಸಿಬ್ಬಂದಿಯಿಂದ ದಿನಾಂಕ: 17-01-2022 ರಿಂದ 05-02-2022 ರವರೆಗೆ ಒಟ್ಟು 120 ಮಾನವ ದಿನಗಳನ್ನು ಉಪಯೋಗಿಸಿಕೊಂಡು ಲೆಕ್ಕಪರಿಶೋಧನೆಯನ್ನು ಮುಕ್ತಾಯಗೊಳಿಸಲಾಗಿದೆ. ಸದರಿ ಸಿಬ್ಬಂದಿಗಳಿಗೆ ತಗುಲಿದ ವೆಚ್ಚ ಈ ಕೆಳಗಿನಂತಿದೆ.

| ಕ್ರ. ಸಂ. | ಸಿಬ್ಬಂದಿ ವಿವರಗಳು | ವೇತನ |
|---|---|---|
| 1 | ಲೆಕ್ಕಪರಿಶೋಧನಾಧಿಕಾರಿ (02) | 1,01,800 |
| 2 | ಲೆಕ್ಕ ಸಹಾಯಕರು (06) | 1,81,340 |
| | **ಒಟ್ಟು (08)** | **2,83,140** |

| ವರ್ಷ | ಪ್ರಾರಂಭ | ಬೇಡಿಕೆ | ಒಟ್ಟು |
|---|---|---|---|
| 2018-19 | 2,10,798 | 1,66,680 | 3,77,478 |
| 2019-20 & 2020-21 | 3,77,478 | 2,83,140 | **6,60,618** |

ಸದರಿ ಒಟ್ಟು ಮೊತ್ತ ರೂ. **6,60,618**/-ಗಳ ಮೊತ್ತವನ್ನು ಲೆಕ್ಕ ಶೀರ್ಷಿಕೆ : 0070-60-110-0-01 ಗೆ ಸಂದಾಯ ಮಾಡಲು ಸೂಚಿಸಿದೆ.

ಅಪರ ನಿರ್ದೇಶಕರು,
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ
ಮತ್ತು ಲೆಕ್ಕಪತ್ರ ಇಲಾಖೆ,
ಪ್ರಾಂತೀಯ ಕಛೇರಿ, ಕಲಬುರಗಿ.

ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ತುಂಗಭದ್ರಾ (ಕಾಡಾ) ಮುನಿರಾಬಾದ್ ಕಛೇರಿಯ 2019-20 & 2020-21ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳಲ್ಲಿನ ಆಕ್ಷೇಪಣೆ ಹಾಗೂ ವಸೂಲಾತಿ ಮೊತ್ತದ ತಃಖ್ತೆ.

| ಕ್ರ. ಸಂ. | ಕಂಡಿಕೆ ಸಂಖ್ಯೆ | ವಿವರಣೆ | ಅನುಬಂಧ | ಆಕ್ಷೇಪಣೆ ಮೊತ್ತ | ವಸೂಲಿಸಿದ ಮೊತ್ತ |
|---|---|---|---|---|---|
| 1 | 09 | ಕಾಡಾ ಅಧ್ಯಕ್ಷರ ಕಛೇರಿಗಾಗಿ ವಾಹನ ಚಾಲಕನನ್ನು ನೇಮಕ ಮಾಡಿಕೊಂಡಿರುವ ಕುರಿತು. | 04 | 1,92,406 | 0 |
| 2 | 10 | ಬ್ಯಾಂಕ್ ಗ್ಯಾರಂಟಿ ನವೀಕರಿಸದೇ ಇರುವ ಬಗ್ಗೆ | - | 9,79,286 | 0 |
| 3 | 11 | 2019-20ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ವಯ ಸ್ವೀಕೃತಿ ಮೊತ್ತಕ್ಕು ಲೆಕ್ಕಪರಿಶೋಧನೆಗೆ ಒದಗಿಸಿದ ದಾಖಲೆಗಳನ್ವಯ ಸ್ವೀಕೃತಿ ಮೊತ್ತಕ್ಕೂ ವ್ಯತ್ಯಾಸ ಕಂಡು ಬಂದಿರುವ ಕುರಿತು. | 05 | 7,92,457 | 0 |
| 4 | 12 | ಟೆಂಡರ್ ತಪ್ಪಿಸಲು ಬಿಲ್‌ಗಳನ್ನು ವಿಂಗಡಿಸಿ ದರಪಟ್ಟಿ ಮುಖಾಂತರ ಸಾಮಗ್ರಿಗಳನ್ನು ಖರೀದಿಸಿರುವ ಬಗ್ಗೆ. | - | 2,62,186 | 0 |
| 5 | 13 | ಕಾಮಗಾರಿ ಮುಕ್ತಾಯವಾಗುವ ಮುಂಚೆಯೇ Additional Performance security (Difference D.D) ಬಿಡುಗಡೆಗೊಳಿಸಿರುವ ಬಗ್ಗೆ. | 06 | 2,47,56,493 | 0 |
| 6 | 14 | ಸೂಕ್ತ ಕಾರಣಗಳಿಲ್ಲದೇ ಅಲ್ಪಾವಧಿ ಟೆಂಡರ್ ಕರೆದಿರುವ ಕುರಿತು. | - | 3,49,66,248 | 0 |
| 7 | 17 | ಕಾಮಗಾರಿಗಳ ಮಾರ್ಕ್ ಔಟಗಳನ್ನು ವಿಳಂಬವಾಗಿ ನೀಡಿರುವ ಬಗ್ಗೆ. | 07 | 49,78,067 | 0 |
| | | | ಒಟ್ಟು | 6,69,27,143 | 0 |

ಅಪರ ನಿರ್ದೇಶಕರು,
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ
ಮತ್ತು ಲೆಕ್ಕಪತ್ರ ಇಲಾಖೆ.
ಪ್ರಾಂತೀಯ ಕಛೇರಿ, ಕಲಬುರಗಿ.

# <u>ಭಾಗ-1</u>

**1. ಹಿಂದಿನ ಸಾಲಿನ ಲೆಕ್ಕ ಪರಿಶೋಧನಾ ವರದಿಗೆ ತೆಗೆದುಕೊಂಡ ಕ್ರಮ:-**

ಪ್ರಾಧಿಕಾರದ 1980-81 ರಿಂದ 2018-19ನೇ ಸಾಲಿನ ಲೆಕ್ಕ ತನಿಖಾ ವರದಿಗಳಲ್ಲಿ 31.03.2019 ರ ವರೆಗೆ ಬಾಕಿ ಉಳಿದ ಕಂಡಿಕೆಗಳ ವಿವರವನ್ನು **<u>ಅನುಬಂಧ-2 ರಲ್ಲಿ</u>** ನಮೂದಿಸಿ ವರದಿಗೆ ಲಗತ್ತಿಸಿದೆ. ಇನ್ನೂ ತಿರುವಳಿಯಾಗಬೇಕಾದ ಕಂಡಿಕೆಗಳ ಆಕ್ಷೇಪಣೆ ಮೊತ್ತ ಮತ್ತು ವಸೂಲಾತಿಗೆ ಸೂಚಿಸಿದ ಮೊತ್ತ ಹಾಗೆಯೇ ಇರುತ್ತದೆ. ಕಾರಣ ಬಾಕಿ ಇರುವ ಎಲ್ಲಾ ಕಂಡಿಕೆಗಳಿಗೆ ಅನುಪಾಲನಾ ವರದಿ ಸಲ್ಲಿಸಿ ಕಂಡಿಕೆಗಳನ್ನು ಇತ್ಯರ್ಥಪಡಿಸಿಕೊಳ್ಳಲು ಸೂಚಿಸಲಾಗಿದೆ.

**2. ಲೆಕ್ಕಪರಿಶೋಧನಾ ವ್ಯಾಪ್ತಿ :-**

1. **ಲೆಕ್ಕಪರಿಶೋಧನಾ ವರದಿ ನೀಡಲು ಪ್ರಾಧಿಕಾರ:-**

ಕರ್ನಾಟಕ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಕಾಯ್ದೆ 1980 ಸೆಕ್ಷನ್ 24(2)ರ ಪ್ರಕಾರ ತುಂಗಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃಧ್ಧಿ ಪ್ರಾಧಿಕಾರ ಮುನಿರಾಬಾದ್ 2019-20 ಮತ್ತು 2020-21ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ಕೈಗೊಂಡು ವರದಿಯನ್ನು ಸಿದ್ಧಪಡಿಸಲಾಗಿದೆ.

2. **ಮುಂದುವರೆದು, ಲೆಕ್ಕಪರಿಶೋಧನಾ ಕಾರ್ಯದಲ್ಲಿ ಈ ಕೆಳಗಿನ ಕಾಯ್ದೆ ಹಾಗೂ ನಿಯಮಾವಳಿಗಳನ್ನು ಆಧರಿಸಿಕೊಳ್ಳಲಾಗಿದೆ.**

(ಅ). ಅಚ್ಚುಕಟ್ಟು ಪ್ರದೇಶಾಭಿವೃಧ್ಧಿ ಪ್ರಾಧಿಕಾರದ ಕಾಲಕಾಲಕ್ಕೆ ಹೊರಡಿಸಿದ್ದ ಅನುಶಾಸನಗಳು, ಆಧ್ಯಾದೇಶಗಳು, ಪರಿನಿಯಮಗಳು.

(ಆ). ಕರ್ನಾಟಕ ಆರ್ಥಿಕ ಸಂಹಿತೆ 1958.

(ಇ). ಸಾದಿಲ್ವಾರು ವೆಚ್ಚದ ಕೈಪಿಡಿ 1958.

(ಈ). ಕರ್ನಾಟಕ ನಾಗರಿಕ ಸೇವಾ ನಿಯಮಗಳು.

(ಉ). ಕರ್ನಾಟಕ ಲೋಕೋಪಯೋಗಿ ಇಲಾಖೆ ಸಂಹಿತೆ.

6

(ಊ). ಕರ್ನಾಟಕ ಲೋಕೋಪಯೋಗಿ ಲೆಕ್ಕಪತ್ರ ಸಂಹಿತೆ.

(ಋ). ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು 2000.

(ಎ). ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಲಾದ ಆದೇಶಗಳು ಹಾಗೂ ಸುತ್ತೋಲೆಗಳು.

(ಏ). ಕಾಡಾ ಅಧಿನಿಯಮ 1980.

(ಐ). ಕಾಡಾದ ವೃಂದ ಮತ್ತು ನೇಮಕಾತಿ ನಿಯಮಗಳು.

(ಒ). ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮ 2002 ಹಾಗೂ ತತ್ಸಂಬಂಧ ನಿಯಮಗಳು 2003 (ಕರ್ನಾಟಕ ಫಿಸ್ಕಲ್ ರೆಸ್ಪಾನ್ಸಿಬಿಲಿಟಿ ಆಕ್ಟ್).

(ಓ). ಕರ್ನಾಟಕ ಸರ್ಕಾರದ ಖಾತರಿಗಳ ಮೇಲಿನ ಪರಿಮಿತಿ ಅಧಿನಿಯಮ 1999(ಕೆ.ಸಿ.ಜಿ.ಜಿ.ಆ್ಯಕ್ಟ್).

## ಭಾಗ-2

1. **ಪ್ರಸ್ತುತ ಲೆಕ್ಕ ತಪಾಸಣೆ:-**

ಪ್ರಸಕ್ತ ಸಾಲಿನ ಲೆಕ್ಕ ತಪಾಸಣೆಯು 2019-20 ಮತ್ತು 2020-21ನೇ ಸಾಲಿಗೆ ಸಂಬಂಧಿಸಿದ್ದು, 01.04.2019 ರಿಂದ 31.03.2021ರ ವರೆಗೆ ಒಳಗೊಂಡಿರುತ್ತದೆ. ಸದರಿ ಸಾಲಿನ ಆಕ್ಷೇಪಣೆ ಹಾಗೂ ವಸೂಲಾತಿ ಕಂಡಿಕೆಗಳು ಹಾಗೂ ಮೊತ್ತದ ವಿವರದ ತಃಖ್ತೆಯನ್ನು ವರದಿಗೆ ಪ್ರತ್ಯೇಕವಾಗಿ ಲಗತ್ತಿಸಿದೆ.

2. **ವಾರ್ಷಿಕ ಲೆಕ್ಕಪತ್ರ :-**

1980ರ ಕರ್ನಾಟಕ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಅಧಿನಿಯಮ 24(1) ರ ಪ್ರಕಾರ 2020-21ನೇ ಸಾಲಿನ ವಾರ್ಷಿಕ ಲೆಕ್ಕಪತ್ರ ಸಿದ್ಧಪಡಿಸಿ, ಆಡಳಿತಾಧಿಕಾರಿಗಳ ಪತ್ರ ಸಂಖ್ಯೆ: ಕಾಡಾಮು/ಟಿಬಿಪಿ/2020-21/ವಾಲೆಪ/2021-22/945 ದಿನಾಂಕ:27-12-2021 ರನ್ವಯ ನಿರ್ದೇಶಕರು ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರಗಳ ನಿರ್ದೇಶನಾಲಯ, ಕರ್ನಾಟಕ ರಾಜ್ಯ ನಿರ್ಮಾಣ ನಿಗಮ, ಪೂರಕ ಕಟ್ಟಡ, 1ನೇ ಮಹಡಿ, ರಾಜಾಜಿನಗರ, 1ನೇ ಬ್ಲಾಕ್, ಬೆಂಗಳೂರು-560010 ಇವರಿಗೆ ಸಲ್ಲಿಸಿರುತ್ತಾರೆ.

3. **ಸ್ವೀಕೃತಿ ಮತ್ತು ವೆಚ್ಚ :-**

2019-20 ಮತ್ತು 2020-21ನೇ ಸಾಲಿಗೆ ಸಂಬಂಧಿಸಿದಂತೆ, ಸ್ವೀಕೃತಿ ಮತ್ತು ವೆಚ್ಚದ ತಃಖ್ತೆಯನ್ನು **ಅನುಬಂಧ-3** ರಲ್ಲಿ ನೀಡಲಾಗಿದೆ.

4. **2019-20 ಮತ್ತು 2020-21ನೇ ಸಾಲಿನ ವೇತನ ಮತ್ತು ಇತರೆ ಭತ್ಯೆಗಳನ್ನು ಹೆಚ್.ಆರ್.ಎಮ್.ಎಸ್. ಮೂಲಕ ಸೆಳೆಯದೇ ಇರುವ ಬಗ್ಗೆ.**

ಖಜಾನೆ ನಿರ್ದೇಶನಾಲಯದ ಪತ್ರ ಸಂಖ್ಯೆ:(1) ಖ.ನಿ.ಎನ್.ಪಿ.ಎಸ್.ನಿ:30:2014-15 ದಿನಾಂಕ: 03-05-2016 ಮತ್ತು (2)ಖ.ನಿ:ಎನ.ಪಿ.ಎಸ್.ನಿ.30:2014-15 ದಿನಾಂಕ 25-08-2016ರ ಅನ್ವಯ ವೇತನ ಮತ್ತು ಇತರೆ ಭತ್ಯೆಗಳನ್ನು HRMS ಮೂಲಕ ಹಣ ಸೆಳೆಯಲು ಡಿ.ಡಿ.ಓ ಕೋಡಗಳನ್ನು ಹಂಚಿಕೆ ಮಾಡಿರುತ್ತಾರೆ.

ಆದರೆ 2019-20 ಮತ್ತು 2020-21ನೇ ಸಾಲಿನ ವೇತನ ಬಿಲ್ಲುಗಳನ್ನು ಪರಿಶೀಲಿಸಿದಾಗ ಸದರಿ ಬಿಲ್ಲುಗಳನ್ನು HRMS ನಲ್ಲಿ ಸಿದ್ಧಪಡಿಸದೇ, ಮ್ಯಾನ್ಯುವಲ್ ಆಗಿ ಮಾಡುತ್ತಿರುವ ಬಗ್ಗೆ ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿರುತ್ತದೆ.

ಪ್ರಯುಕ್ತ HRMS ನಲ್ಲಿ ವೇತನ ಮತ್ತು ಇತರೆ ಭತ್ಯೆ ಬಿಲ್ಲುಗಳನ್ನು ಸರ್ಕಾರದ ಆದೇಶ ಹೊರಡಿಸಿದ ಮೂರು ವರ್ಷಗಳಾದರೂ ಸೆಳೆಯದೇ ಇರುವುದಕ್ಕೆ ಸ್ಪಷ್ಟೀಕರಣ ನೀಡಲು ಸೂಚಿಸಿದೆ. 2019-20 ಮತ್ತು 2020-21ನೇ ಸಾಲಿನಲ್ಲಿ ವೇತನ ಹಾಗೂ ಇತರೆ ಭತ್ಯೆಗಳಿಗೆ ರೂ..7,63,72,942/- ಮತ್ತು 5,28,07,219 ಒಟ್ಟು 12,91,80,161/-ಗಳನ್ನು ಸೆಳೆಯಲಾಗಿರುತ್ತದೆ. ಹೆಚ್.ಆರ್.ಎಂ.ಎಸ್‌ನಲ್ಲಿ ಕೆಲವು ತಾಂತ್ರಿಕ ತೊಂದರೆಗಳಿರುವುದರಿಂದ ಸರ್ಕಾರವು ಮಾರ್ಚ್-2022ರವರೆಗೆ ಮಾನ್ಯುವಲ್‌ನಲ್ಲಿ ವೇತನ ಮತ್ತು ಇತರೆ ಭತ್ಯೆಗಳನ್ನು ಸೆಳೆಯಲು ತರುವಾಯ ಕಡ್ಡಾಯವಾಗಿ ಹೆಚ್.ಆರ್.ಎಮ್.ಎಸ್‌ನಲ್ಲಿ ಸೆಳೆಯಲು ತಿಳಿಸಿರುವ ಪ್ರಯುಕ್ತ ಹೆಚ್.ಆರ್.ಎಮ್.ಎಸ್‌ನಲ್ಲಿ ಕ್ರಮ ಕೈಗೊಳ್ಳಲು ತಿಳಿಸಿದೆ. ಈ ಕುರಿತು **ವಿಚಾರಣೆ ಪತ್ರ ಸಂಖ್ಯೆ: 02 ರಂದು ದಿನಾಂಕ:19/01/2022 ರಂದು ನೀಡಲಾಗಿದೆ.**

## 5. ಆಯವ್ಯಯ ಅಂದಾಜು ಮತ್ತು ವಾರ್ಷಿಕ ಲೆಕ್ಕಪತ್ರಗಳಲ್ಲಿನ ವ್ಯತ್ಯಾಸದ ಕುರಿತು.

ಕಾಡಾ ಮುನಿರಾಬಾದನ 2019-20 ಮತ್ತು 2020-21ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಪರಿಶೀಲಿಸಿದಾಗ ಆಯವ್ಯಯ ಅಂದಾಜು ಮತ್ತು ವಾರ್ಷಿಕ ಲೆಕ್ಕಪತ್ರದಲ್ಲಿನ ಮೊತ್ತವು ವ್ಯತ್ಯಾಸ ಇರುವುದನ್ನು ಈ ಕೆಳಗಿನಂತೆ ವಿವರಿಸಿದೆ.

**ಆದಾಯಗಳು :- 2019-20**

| ಕ್ರ ಸಂ | ಲೆಕ್ಕ ಶೀರ್ಷಿಕೆ | 2019-20ನೇ ಸಾಲಿನ ಅಂದಾಜು ಆಯವ್ಯಯ | 2019-20ನೇ ಪರಿಷ್ಕೃತ ಆಯವ್ಯಯ | ವಾರ್ಷಿಕ ಲೆಕ್ಕಪತ್ರ | ವ್ಯತ್ಯಾಸ |
|---|---|---|---|---|---|
| 01 | ಕೇಂದ್ರ ವಲಯ ಯೊಜನೆ | 18,58,00,000 | 18,58,00,000 | 20,85,50,000 | 4,13,00,000 |
| 02 | ರಾಜ್ಯವಲಯ ಯೋಜನೆ | 0 | 0 | | |
| 03 | ನಬಾರ್ಡ ಕಾಮಗಾರಿಗಳು | 75,08,000 | 75,08,000 | | |
| 04 | ವಿಶೇಷ ಅಭಿವೃದ್ಧಿಯೋಜನೆ | 5,65,42,000 | 5,65,42,000 | | |
| | **ಒಟ್ಟು (ಎ)** | **24,98,50,000** | **24,98,50,000** | **20,85,50,000** | **4,13,00,000** |
| 05 | ಇತರೆ ಸ್ವೀಕೃತಿ ಒಟ್ಟು | 0 | 0 | 54,10,701 | 54,10,701 |
| | **ಒಟ್ಟು (ಬಿ)** | **0** | **0** | **54,10,701** | **54,10,701** |
| | **ಒಟ್ಟು (ಎ+ಬಿ)** | **24,98,50,000** | **24,98,50,000** | **21,39,60,701** | **3,58,89,299** |

ವೆಚ್ಚ :-

| ಕ್ರ.ಸಂ. | ಲೆಕ್ಕ ಶೀರ್ಷಿಕೆ | ಆಯವ್ಯಯ ಅಂದಾಜು | ಪರಿಷ್ಕೃತ ಅಂದಾಯ | ವಾರ್ಷಿಕ ಲೆಕ್ಕ | ವ್ಯತ್ಯಾಸ |
|---|---|---|---|---|---|
| 01 | ಕೇಂದ್ರ ವಲಯ | 18.58.00.000 | 18.58.00.000 | 14.33.73.000 | 4.24.27.000 |
| 02 | ರಾಜ್ಯ ವಲಯ | 2.68.00.000 | 2.68.00.000 | 2.68.00.000 | 0 |
| 03 | ನಬಾರ್ಡ ಕಾಮಗಾರಿ | 75.08.000 | 75.08.000 | 53.65.000 | 21.43.000 |
| 04 | ವಿಶೇಷ ಅಭಿವೃದ್ಧಿ | 5.65.42.000 | 5.65.42.000 | 5.65.42.000 | 0 |
| 05 | ಇತರೆ | 0 | 0 | 78.19.5551 | (-) 78.19.551 |
| | ಒಟ್ಟು | **27,66,50,000** | **27,66,50,000** | **23,98,99,551** | **3,67,50,449** |

ಆದಾಯಗಳು:- 2020-21

| ಕ್ರ. ಸಂ. | ಲೆಕ್ಕಶೀರ್ಷಿಕೆ | ಅಂದಾಜು ಆಯವ್ಯಯ | ಪರಿಷ್ಕೃತ ಅಂದಾಜು | ವಾರ್ಷಿಕ ಲೆಕ್ಕಪತ್ರ | ವ್ಯತ್ಯಾಸ |
|---|---|---|---|---|---|
| 01 | ಕೇಂದ್ರ ವಲಯ | 7.31.59.000 | 7.31.59.000 | 6.35.28.000 | 96.31.000 |
| 02 | ರಾಜ್ಯ ವಲಯ | 4.51.00.000 | 4.51.00.000 | 3.54.00.000 | 97.00.000 |
| 03 | ನಬಾರ್ಡ | 6.00.00.000 | 6.00.00.000 | 21.60.000 | 5.78.40.000 |
| 04 | ವಿಶೇಷ ಅಭಿವೃದ್ಧಿ | 5.93.43.000 | 5.93.43.000 | 3.13.90.000 | 2.79.53.000 |
| 05 | ಇತರೆ ಸ್ವೀಕೃತಿ | 0 | 0 | 40.89.882 | (-) 40.89.882 |
| | ಒಟ್ಟು | **23,76,02,000** | **23,76,02,000** | **13,65,67,882** | **10,10,34,118** |

ವೆಚ್ಚ :-

| ಕ್ರ.ಸಂ | ಲೆಕ್ಕ ಶೀರ್ಷಿಕೆ | ಅಂದಾಜು ಆಯವ್ಯಯ | ಪರಿಷ್ಕೃತ | ವಾರ್ಷಿಕ ಲೆಕ್ಕ ಪತ್ರ | ವ್ಯತ್ಯಾಸ |
|---|---|---|---|---|---|
| 01 | ಕೇಂದ್ರ ವಲಯ | 7.31.59.000 | 7.31.59.000 | 5.81.89.980 | 1.49.69.020 |
| 02 | ರಾಜ್ಯ ವಲಯ | 4.51.00.000 | 4.51.00.000 | 3.44.00.000 | 1.07.00.000 |
| 03 | ನಬಾರ್ಡ | 6.00.00.000 | 6.00.00.000 | 21.50.764 | 5.78.49.236 |
| 04 | ವಿಶೇಷ ಅಭಿವೃದ್ಧಿ | 5.93.43.000 | 5.93.43.000 | 98.89.967 | 4.94.53.033 |
| 05 | ಇತರೆ | 0 | 0 | 37.91.490 | (-)37.91.490 |
| | ಒಟ್ಟು | **23,76,02,000** | **23,76,02,000** | **10,84,22,201** | **12,91,79,799** |

ಕರ್ನಾಟಕದ ಬಜೆಟ್ ಮ್ಯಾನುವಲ್‌ನ ನಿಯಮ 85ರಲ್ಲಿ "The estimate should take into account only such receipts and payments, as the estimating officer expect to be actually realized or made during the year The aim must be to make estimates as accurate as possible, not to over estimate and show large savings at the end of the year. The tendency to under estimate revenue and over expenditure so as to be always on the safer side must be avoided" ಎಂದು ತಿಳಿಸಿದೆ. ಆದರೆ ಕಾಡಾ ಮುನಿರಾಬಾದನ 2019-20ನೇ ಸಾಲಿನ ಆದಾಯದಲ್ಲಿ ರೂ.3,58,89,299/-ಗಳ ವ್ಯತ್ಯಾಸ ಮತ್ತು ಪಾವತಿಯಲ್ಲಿ ರೂ.3,67,50,449/-ಗಳ ವ್ಯತ್ಯಾಸ ಕಂಡುಬಂದಿರುತ್ತದೆ. ಅಂದರೆ ಪರಿಷ್ಕೃತ ಆಯವ್ಯಯದಲ್ಲಿ ಆದಾಯದ ಮೊತ್ತ ರೂ.24,98,50,00/-ಗಳನ್ನು ಅಂದಾಜಿಸಲಾಗಿತ್ತು ಆದರೆ ವಾಸ್ತವವಾಗಿ ಆದಾಯ ಬಂದಿದ್ದು ರೂ.21,39,60,701/-ಗಳು ಮಾತ್ರ ಇದರಿಂದ ರೂ. 3,58,89,299/-ಗಳ ವ್ಯತ್ಯಾಸ ಬಂದಿರುತ್ತದೆ ಅದೇ ರೀತಿ ಪಾವತಿಯಲ್ಲಿಯೂ ಕೂಡ ರೂ.3,67,50,449/-ಗಳ ವ್ಯತ್ಯಾಸ ಬಂದಿರುತ್ತದೆ.

ಅದೇ ರೀತಿ 2020-21ನೇ ಸಾಲಿನ ಆದಾಯದ ಅಂದಾಜಿನಲ್ಲಿ ರೂ.10,10,34,118/-ಗಳ ವ್ಯತ್ಯಾಸ ಮತ್ತು ಪಾವತಿಯ ಅಂದಾಜಿನಲ್ಲಿ ರೂ.12,91,79,799/- ಗಳ (ವಾಸ್ತವವಾಗಿ ಆದಾಯ ಮತ್ತು ಖರ್ಚನ್ನು ಹೋಲಿಸಿದಾಗ) ವ್ಯತ್ಯಾಸವಿರುವುದು ಗಮನಿಸಿದೆ ಇದರಿಂದಾಗಿ ಕಾಡಾದಲ್ಲಿ ಆಯವ್ಯಯದ ಅಂದಾಜುಗಳು ನೈಜವಾಗಿ ಸಿದ್ಧಪಡಿಸದೇ ಇರುವುದು ಕಂಡುಬಂದಿರುತ್ತದೆ.

ಬಜೆಟ್ ಮ್ಯಾನುವೆಲ್ 181ರಲ್ಲಿ, "The head of department should use their discretion and adopt suitable method for each particular case in the light of actual trend of expenditure during the previous year" ಎಂದು ತಿಳಿಸಿದೆ. ಬಜೆಟ್ ಮ್ಯಾನುವಲ್ 110ರಲ್ಲಿ "In preparing the estimates for the coming year, the average of the actual of the past three years, as also the revised estimates for the current year, should invariably be kept in sight not as something that could conveniently be repeated" ಎಂದಿದೆ. ಆದರೆ ಕಾಡಾ ಮುನಿರಾಬಾದನಲ್ಲಿ ಈ ಮೇಲೆ ತಿಳಿಸಿರುವ ನಿಯಮಗಳನ್ವಯ ಆಯವ್ಯಯವನ್ನು

ಸಿದ್ಧಪಡಿಸಿರುವುದಿಲ್ಲ. ಇದರಿಂದ ಆಯವ್ಯಯದಲ್ಲಿ ನಮೂದಿಸಿರುವ ಮೊತ್ತವು ನೈಜತೆಯಿಂದ ಕೂಡಿದೆ ಎಂದು ಲೆಕ್ಕಪರಿಶೋಧನೆಗೆ ಹೇಳಲು ಸಾಧ್ಯವಿಲ್ಲ.

ಮುಂದುವರೆದು 2019-20ನೇ ಸಾಲಿನಲ್ಲಿ ಕೊರತೆಯ ಆಯವ್ಯಯವನ್ನು ಮಂಡಿಸಿರುವುದು ಲೆಕ್ಕಪರಿಶೋಧನೆಯಲ್ಲಿ ಗಮನಿಸಿದೆ. ಅಂದರೆ ಮೂಲ ಆಯವ್ಯಯದಲ್ಲಿ ರೂ.24,98,50,000/-ಗಳನ್ನು ಸ್ವೀಕೃತಿಯಾಗಬಹುದೆಂದು ಮತ್ತು ಮೂಲ ಆಯವ್ಯಯದ ಪಾವತಿಯಲ್ಲಿ ರೂ. 27,66,50,000/-ಗಳ ವೆಚ್ಚವಾಗಬಹುದೆಂದು ಅಂದಾಜಿಸಲಾಗಿದೆ. ಅಂದರೆ ಇವೆರಡರ ವ್ಯತ್ಯಾಸದ ಮೊತ್ತ ರೂ. 2,68,00,000/-ಗಳ ಕೊರತೆಯ ಆಯವ್ಯಯವನ್ನು ಮಂಡಿಸಿದೆ ಸದರಿ ಕೊರತೆಯ ಆಯವ್ಯಯ ಮಂಡಿಸಲು ಕಾರಣವೇನು ತಿಳಿಸುವುದು.

2019-20ನೇ ಸಾಲಿನಲ್ಲಿ ಇತರೆ ಸ್ವೀಕೃತಿಯ ಲೆಕ್ಕಶೀರ್ಷಿಕೆಯಡಿಯಲ್ಲಿ ಆಯವ್ಯಯದ ಅಂದಾಜನ್ನು ಪ್ರಾವಧಾನಿಕರಿಸದೇ ರೂ.54,10,701/-ಗಳು ಸ್ವೀಕೃತಿಯಾಗಿರುತ್ತದೆ. ಇದಕ್ಕೆದುರಾಗಿ ಇತರೆ ವೆಚ್ಚದಲ್ಲಿ ರೂ.78,19,551/-ಗಳು ವೆಚ್ಚವಾಗಿರುತ್ತದೆ ಕಡಿಮೆ ಮೊತ್ತ ಸ್ವೀಕರಿಸಿ ಹೆಚ್ಚು ಖರ್ಚು ಮಾಡಿರುವುದು ಹೇಗೆ ಎಂಬುವುದು ತಿಳಿದು ಬಂದಿರುವುದಿಲ್ಲ ಮತ್ತು ಇದೇ ರೀತಿ 2020-21ನೇ ಸಾಲಿನಲ್ಲೂ ಸಹ ಆಯವ್ಯಯವನ್ನು ಪ್ರಾವಧಾನಿಕರಿಸದೇ ಸ್ವೀಕೃತಿ ಮತ್ತು ವೆಚ್ಚದ ಮೊತ್ತವನ್ನು ನಮೂದಿಸಿದೆ. ಇದಕ್ಕೆ ಸ್ಪಷ್ಟೀಕರಣ ಕೋರಿದೆ. ಈ ಕುರಿತು **ವಿಚಾರಣೆ ಪತ್ರ ಸಂಖ್ಯೆ:03 ದಿನಾಂಕ:19-01-2022 ರಂದು ನೀಡಲಾಗಿದೆ.** ಸದರಿ ಕಂಡಿಕೆಗೆ ನೀಡಿರುವ ಉತ್ತರವು ಸಮಂಜಸವಿಲ್ಲದ ಪ್ರಯುಕ್ತ ಮತ್ತು ಈ ಮೇಲೆ ತಿಳಿಸಿರುವ ಕ್ರಮಗಳನ್ನು ಮುಂದಿನ ಸಾಲಿನಲ್ಲಿ ಅಳವಡಿಸಿಕೊಳ್ಳಲು ತಿಳಿಸಿ ಕಂಡಿಕೆಯನ್ನು ಮುಂದುವರೆಸಿದೆ.

6. **ಪ್ರಾಧಿಕಾರದ ಸಭೆಗಳನ್ನು ಕೈಗೊಳ್ಳದೇ ಇರುವ ಕುರಿತು.**

ಕಾಡಾ ಮುನಿರಾಬಾದನ 2019-20 ಮತ್ತು 2020-21ನೆ ಸಾಲಿನ ಲೆಕ್ಕಪರಿಶೋಧನೆಯನ್ನು ಕೈಗೊಳ್ಳುವಾಗ ಪ್ರಾಧಿಕಾರದ ಸಭೆಯು ಕೊನೆಯದಾಗಿ (59ನೇ ಸಭೆ) 2016ರಲ್ಲಿ ಜರುಗಿದ್ದು, ತರುವಾಯ ಯಾವುದೇ ಸಭೆ ನಡೆದಿರುವುದಿಲ್ಲ.

ಈ ಕುರಿತು ಕಾಡಾ ಕಾಯ್ದೆ 1980ರ ನಿಯಮ 9ರಲ್ಲಿ "The authority shall meet at least once in three months ordinarily at the office of the authority, or at such other place within the command area as the chairman may decide" ಎಂದಿದೆ. ಕಾಡಾ ಸಭೆಗಳನ್ನು ಕನಿಷ್ಠ ಮೂರು ತಿಂಗಳಿಗೊಮ್ಮೆ ನಡೆಸಿ ಸದರಿ ಪ್ರಾಧಿಕಾರದ ಯೋಜನೆಗಳನ್ನು ಅನುಷ್ಠಾನಗೊಳಿಸುವ ಪ್ರಥಮ ಆದ್ಯತೆಯಾಗಬೇಕು. ಆದರೆ

2016 ರಿಂದ ಇಲ್ಲಿಯವರೆಗೆ ಯಾವುದೇ ಸಭೆ ನಡೆಸದೇ ಈ ಮೇಲೆ ತಿಳಿಸಿರುವ ನಿಯಮವನ್ನು ಉಲ್ಲಂಘಿಸಿರುತ್ತಾರೆ. ಸದರಿ ಸಭೆಗಳನ್ನು ನಡೆಸದೇ ಇರುವುದಕ್ಕೆ ಸ್ಪಷ್ಟೀಕರಣ ಕೋರಿದೆ. ಈ ಕುರಿತು ಲೆಕ್ಕಪರಿಶೋಧನೆ **ವಿಚಾರಣೆ ಸಂಖ್ಯೆ:04 ದಿನಾಂಕ:20-01-2022 ರಂದು ನೀಡಿರುತ್ತಾರೆ**. ಸದರಿ ಕಂಡಿಕೆಗೆ ನೀಡಿರುವ ಉತ್ತರ ಸಮಂಜಸವಿಲ್ಲದ ಪ್ರಯುಕ್ತ ಕಂಡಿಕೆಯನ್ನು ಮುಂದುವರೆಸಿದೆ.

7. **2019-20 ಹಾಗೂ 2020-21ನೇ ಸಾಲಿನ ನಗದು ಪುಸ್ತಕ ನಿರ್ವಹಿಸುವಲ್ಲಿ ಕಂಡುಬಂದ ನ್ಯೂನ್ಯತೆಗಳು.**

ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ತುಂಗಭದ್ರಾ ಯೋಜನೆ ಮುನಿರಾಬಾದ ನಲ್ಲಿ ಒಟ್ಟು 07 ಬ್ಯಾಂಕ್ ಖಾತೆಗಳಲ್ಲಿ ನಿರ್ವಹಿಸುತ್ತಿದ್ದು, ಅವುಗಳ ವಿವರ ಈ ಕೆಳಗಿನಂತಿದೆ.

| ಕ್ರ.ಸಂ | ಬ್ಯಾಂಕ್ ಖಾತೆ ಸಂಖ್ಯೆ | ಖಾತೆಯ ವಿಧ | ಬ್ಯಾಂಕ್ ವಿವರ | ಶಾಖೆ |
|---|---|---|---|---|
| 01 | 10589100007832 | ಎಸ್.ಬಿ | PKGB | ಹೊಸಪೇಟಿ |
| 02 | 10605100009060 | ಎಸ್.ಬಿ | PKGB | ಬಳ್ಳಾರಿ |
| 03 | 10812100011162 | ಎಸ್.ಬಿ | PKGB | ಸಿಂಧನೂರ್ |
| 04 | 10714100003622 | ಎಸ್.ಬಿ | PKGB | ಕುರುಗೋಡೆ |
| 05 | 10734100002556 | ಎಸ್.ಬಿ | PKGB | ಮಾನ್ವಿ |
| 06 | 10777274021 | ಸಿ.ಎ | SBI | ಮುನಿರಾಬಾದ್ |
| 07 | 33235116594 | ಎಸ್.ಬಿ. | SBI | ಮುನಿರಾಬಾದ್ |

ಸದರಿ ಖಾತೆಗಳ ನಗದು ಪುಸ್ತಕವನ್ನು ಪರಿಶೀಲಿಸಿದಾಗ ಈ ಕೆಳಕಂಡ ನ್ಯೂನ್ಯೆತೆಗಳು ಕಂಡುಬಂದಿರುತ್ತವೆ.

01. ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ 331ರ ಪ್ರಕಾರ ನಗದು ಪುಸ್ತಕವನ್ನು ಪ್ರತಿ ನಿತ್ಯವೂ ಬರೆಯತಕ್ಕದು, ಪ್ರತಿಯೊಂದು ಜಮೆ ಅಥವಾ ವೆಚ್ಚಕ್ಕೆ ಸಂಬಂಧಿಸಿದ ನಮೂದನ್ನು ವ್ಯವಹಾರಕ್ಕೆ ತಕ್ಕಂತೆ ಏಕ ಕಾಲದಲ್ಲಿ ಮಾಡತಕ್ಕದ್ದು. ಪ್ರತಿ ದಿನವು ಆರಂಭಿಕ ಶಿಲ್ಕನ್ನು ಜಮೆಗಳ ಸಾಲಿನಲ್ಲಿ ಅವುಗಳ ಸ್ವೀಕೃತಿಗಳ ಅನುಕ್ರಮದಲ್ಲಿ ಬರೆಯತಕ್ಕದು, ಹಾಗೆಯೇ ಪ್ರತಿ ಬಾಬಿನ ಬಗ್ಗೆ ಮಾಡಿದ ವೆಚ್ಚ ಅವುಗಳ ಎದುರಿಗೆ ಬರೆಯತಕ್ಕದು, ಪ್ರತಿ ದಿನವು ನಗದು ಪುಸ್ತಕವನ್ನು ಪೂರ್ಣಗೊಳಿಸಿ ಶಿಲ್ಕನ್ನು

ಬರೆಯತಕ್ಕದು, ತಿಂಗಳ ಕೊನೆಗೆ ತಿಂಗಳ ಕೊನೆಯ ದಿನದ ವ್ಯವಹಾರವು ಪೂರ್ತಿಗೊಂಡ ತರುವಾಯ ಪ್ರತಿ ದಿನದ ಕೊನೆಯಲ್ಲಿ ಪೂರ್ಣಗೊಳಿಸುವಂತೆಯೇ ನಗದು ಪುಸ್ತಕವನ್ನು ಪೂರ್ಣಗೊಳಿಸತಕ್ಕದು ಮತ್ತು ನಗದು ಶಿಲ್ಕಗಳಿಗನುಗುಣವಾಗಿ ಹಾಗೂ ವಿವರವಾಗಿ ಬಾಬುಗಳ ವಿವರಗಳನ್ನು ಕೊಡತಕ್ಕದು. ಎಂದು ತಿಳಿಸಿದೆ. ಆದರೆ ಕಾಡಾ ಮುನಿರಾಬಾದ ನಗದು ಪುಸ್ತಕವನ್ನು ಪರಿಶೀಲಿಸಿದಾಗ ಸದರಿ ಅನುಚ್ಛೇದದನ್ವಯ ಕ್ರಮ ಅನುಸರಿಸಿರುವುದಿಲ್ಲ.

02. ಸದರಿ ಬ್ಯಾಂಕ್ ಖಾತೆಗಳಿಗೆ ಸಂಬಂಧಿಸಿದಂತೆ, ಬ್ಯಾಂಕ್ ಖಾತೆವಾರು ನಗದು ಪುಸ್ತಕ ನಿರ್ವಹಿಸಿರುವುದಿಲ್ಲ.

03. ಬ್ಯಾಂಕ್ ಖಾತೆವಾರು ನಗದು ಪುಸ್ತಕಗಳನ್ನು ನಿರ್ವಹಿಸಿ ಪ್ರತಿ ಮಾಹೆಯ ಅಂತ್ಯದಲ್ಲಿ ಬ್ಯಾಂಕ್ ಲೆಕ್ಕ ಸಮನ್ವಯವನ್ನು ಮಾಡಲು ಸೂಚಿಸಿದೆ.

04. ಕಾಡಾ ಮುನಿರಾಬಾದನ ನಗದು ಪುಸ್ತಕವನ್ನು ಏಕ ನಮೂದು ಪದ್ಧತಿಯಲ್ಲಿ ನಿರ್ವಹಿಸಲಾಗಿದ್ದು, ದ್ವಿನಮೂದು ಪದ್ಧತಿಯಲ್ಲಿ (Double Entry System) ನಿರ್ವಹಿಸಲು ಸೂಚಿಸಿದೆ.

ಪ್ರಯುಕ್ತ ಈ ಮೇಲಿನ ಎಲ್ಲಾ ನ್ಯೂನ್ಯತೆಗಳನ್ನು ಸರಿಪಡಿಸಿಕೊಳ್ಳಲು ಸೂಚಿಸಿದೆ. ಈ ಕುರಿತು ಲೆಕ್ಕಪರಿಶೋಧನಾ **ವಿಚಾರಣೆ ಪತ್ರ ಸಂಖ್ಯೆ:07 ದಿನಾಂಕ:21.01.2022 ರಂದು ನೀಡಲಾಗಿದೆ.** ಕಂಡಿಕೆಯಲ್ಲಿ ತಿಳಿಸಿರುವ ಅಂಶಗಳನ್ನು ಮುಂದಿನ ಸಾಲಿನಲ್ಲಿ ಅಳವಡಿಸಿಕೊಳ್ಳಲಾಗುವುದು ಎಂದು ತಿಳಿಸಿರುವ ಪ್ರಯುಕ್ತ ನೀಡಿರುವ ಉತ್ತರವು ಮಾನ್ಯ ಮಾಡದೇ ಕಂಡಿಕೆಯನ್ನು ಮುಂದುವರೆಸಿದೆ.

**8. ಕಡಿಮೆ ಜೀವ ವಿಮಾ (ಕೆ.ಜಿ.ಐ.ಡಿ) ಕಡಿತಗೊಳಿಸಿರುವ ಬಗ್ಗೆ.**

ಸರ್ಕಾರದ ಅಧೀನ ಕಾರ್ಯದರ್ಶಿ ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡಗಳು) ರವರ ಅಧಿಸೂಚನೆ ಸಂಖ್ಯೆ:ಆಇ.19 ಕವಿಇ 2018 ದಿ:03/07/2018ರ ಪ್ರಕಾರ ಸರ್ಕಾರಿ ನೌಕರರ ಹುದ್ದೆಯ ಅನ್ವಯವಾಗುವ ವೇತನ ಶ್ರೇಣಿಯ ಮಾಸಿಕ ಕಡ್ಡಾಯ ಜೀವ ವಿಮಾ ಕಂತನ್ನಾಗಿ ಸಂಬಂಧಪಟ್ಟ ಸರ್ಕಾರಿ ನೌಕರರ ಧಾರಣ ಮಾಡಿರುವ ಹುದ್ದೆಯ ವೇತನ ಶ್ರೇಣಿಗೆ ಅನುಗುಣವಾಗಿ ನಿಗದಿ ಪಡಿಸಿರುವ ಕನಿಷ್ಠ ದರವನ್ನು ಬಟವಾಡೆ ಅಧಿಕಾರಿಗಳು ಪ್ರತಿ ಮಾಹೆ ಪಾಲಿಸಿದಾರರ ವೇತನದಿಂದ ಕಟಾಯಿಸಿ ಕರ್ನಾಟಕ ಸರ್ಕಾರಿ ವಿಮಾ ಇಲಾಖೆಗೆ ಪಾವತಿಸತಕ್ಕದು ಎಂದು ತಿಳಿಸಿರುತ್ತದೆ. ಆದರೆ ಕಾಡಾ ಪ್ರಾಧಿಕಾರದಲ್ಲಿ ಈ ಮೇಲೆ ತಿಳಿಸಿರುವ ನಿಯಮದಂತೆ ಕಡಿತಗೊಳಿಸಿರುವುದಿಲ್ಲ ವಿವರ ಈ ಕೆಳಗಿನಂತಿದೆ.

| Sl. No. | Emy Name | ವೇತನ ಶ್ರೇಣಿ | ಕಡಿತಗೊಳಿಸಿದ ಮೊತ್ತ | ಕಡಿತಗೊಳಿಸಬೇಕಾದ ಮೊತ್ತ |
|---|---|---|---|---|
| 01 | Mahadevaiah | 19950-37900 | 1020 | 1810 |
| 02 | Siddappa Divatagi | 40900-78200 | 300 | 3720 |
| 03 | Ibrahim Kaleelulla | 18600-32600 | 220 | 1600 |
| 04 | Chandrashekar | 40900-78200 | 2000 | 3720 |
| 05 | P.Shivanna | 40900-78200 | 2000 | 3720 |
| 06 | S.K Veena | 48900-92700 | 3500 | 4430 |

ಮೇಲ್ಕಂಡ ಕೋಷ್ಠಕದಲ್ಲಿ ತಿಳಿಸಿರುವಂತೆ ಪ್ರತಿಯೊಂದು ಸಿಬ್ಬಂದಿಗಳಿಗೆ ಅವರವರ ವೇತನ ಶ್ರೇಣಿಗೆ ಅನುಗುಣವಾಗಿ ಕನಿಷ್ಠ ಜೀವ ವಿಮಾವನ್ನು ಬಟವಾಡೆ ಅಧಿಕಾರಿಗಳು ಪ್ರತಿ ಮಾಹೆ ಕಡಿತಗೊಳಿಸಬೇಕೆಂಬ ಸರ್ಕಾರದ ಆದೇಶವಿದ್ದರೂ ಕಾಡಾ ಮುನಿರಾಬಾದನಲ್ಲಿ ಈ ಕುರಿತು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಮತ್ತು ಈ ಮೇಲಿನ ಸರ್ಕಾರದ ನಿಯಮವನ್ನು ಉಲ್ಲಂಘಿಸಿರುವುದು ಸ್ಪಷ್ಟವಿದೆ. ಪ್ರಯುಕ್ತ ಈ ಮೇಲೆ ತಿಳಿಸಿರುವ ಆದೇಶದನ್ವಯ ಸಿಬ್ಬಂದಿಗಳ ವೇತನದಿಂದ ಕಡಿತಗೊಳಿಸಲು ತಿಳಿಸಿದೆ.

ಮುಂದುವರೆದು ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಮಾತ್ರ (ಕೆ.ಜಿ.ಐ.ಡಿ) ಕಟಾಯಿಸಿದ್ದು, ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿರುತ್ತದೆ. ಆದರೆ ಕಾಡಾ ಸಿಬ್ಬಂದಿಗಳಿಗೆ (ಕೆ.ಜಿ.ಐ.ಡಿ)ಯ ಕಟಾವಣೆ ಮಾಡಿರುವುದಿಲ್ಲ. ಕಟಾವಣೆ ಮಾಡದಿರುವುದಕ್ಕೆ ಸರ್ಕಾರದ ಆದೇಶ ವಿದ್ದರೆ ಲೆಕ್ಕಪರಿಶೋಧನೆಗೆ ಸಲ್ಲಿಸುವುದು. ಈ ಕುರಿತು ಲೆಕ್ಕಪರಿಶೋಧನಾ **ವಿಚಾರಣೆ ಪತ್ರ ಸಂಖ್ಯೆ:08 ದಿನಾಂಕ:21/01/2022ರಂದು ನೀಡಲಾಗಿದೆ.** ಕಂಡಿಕೆಯಲ್ಲಿ ತಿಳಿಸಿರುವ ಸರ್ಕಾರದ ಆದೇಶದನ್ವಯ ಕೆ.ಜಿ.ಐ.ಡಿಯ ಕಂತನ್ನು ಕಡಿತಗೊಳಿಸಿ ಲೆಕ್ಕಪರಿಶೋಧನೆಗೆ ಸಾದರ ಪಡಿಸಲಾಗುವುದು ಎಂದು ತಿಳಿಸಿರುತ್ತಾರೆ ಸದರಿ ಉತ್ತರವನ್ನು ಮಾನ್ಯ ಮಾಡದೇ ಕಂಡಿಕೆಯನ್ನು ಮುಂದುವರೆಸಿದೆ.

9. **ಕಾಡಾ ಅಧ್ಯಕ್ಷರ ಕಛೇರಿಗಾಗಿ ವಾಹನ ಚಾಲಕನನ್ನು ನೇಮಕ ಮಾಡಿಕೊಂಡಿರುವ ಕುರಿತು.**

ಕಾಡಾ ಮುನಿರಾಬಾದನ ಅಧ್ಯಕ್ಷರಿಗೆ ವಾಹನ ಚಾಲಕನನ್ನು ನೇಮಕ ಮಾಡಿ ಮಾಹೆಯಾನ ಪಾವತಿಸಿದ ವಿವರ **ಅನುಬಂಧ-04ರಲ್ಲಿ** ಲಗತ್ತಿಸಿದೆ. ವಾಹನ ಚಾಲಕನಿಗೆ ಪಾವತಿಸಿದ ರಜಿಸ್ಟರ್‌ನ್ನು ಪರಿಶೀಲಿಸಿದಾಗ ಅಧ್ಯಕ್ಷರು ವಾಹನ ಚಾಲಕನಿಗೆ ಮೊದಲು ಪಾವತಿಸಿ ತರುವಾಯ ಮರುಪಾವತಿಸಿ (Reimbursement) ಕೊಂಡಿರುತ್ತಾರೆ.

ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ ಇವರ ಪತ್ರ ಸಂಖ್ಯೆ: ಆಇ6 ಟಿಎಫ್‌ಪಿ 2018 ದಿನಾಂಕ: 22.03.2019 ರಲ್ಲಿ

1. ಮಂಜೂರಾದ ಹುದ್ದೆಗಳಲ್ಲಿ ಖಾಲಿ ಇದ್ದ ಹುದ್ದೆಗಳಿಗೆದುರಾಗಿ ಕಾರ್ಯನಿರ್ವಹಿಸುತ್ತಿದ್ದ ಗ್ರೂಪ್-'ಡಿ' ಬೆರಳಚ್ಚುಗಾರರು/ಡಿ.ಇ.ಓ, ವಾಹನ ಚಾಲಕರನ್ನು ಮಾತ್ರ ಹೊರಗುತ್ತಿಗೆ ಮೇಲೆ ಮುಂದುವರಿಸಬಹುದು ಅಥವಾ ಹೊರಗುತ್ತಿಗೆ ಅವಧಿ ಪೂರ್ಣಗೊಂಡಿದ್ದಲ್ಲಿ ಕೆ.ಟಿ.ಪಿ.ಪಿ. ಅಧಿನಿಯಮದ ಪ್ರಕಾರ ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಬೇಕು ಎಂದಿದೆ. ಇಲ್ಲಿ ಸ್ಪಷ್ಟವಾಗಿ ವಾಹನ ಚಾಲಕರನ್ನು ಹೊರಗುತ್ತಿಗೆಯ ಆಧಾರದ ಮೇಲೆ ಕೆ.ಟಿ.ಪಿ.ಪಿ. ನಿಯಮದ ಅನ್ವಯ ನೇಮಕಾತಿ ಮಾಡಲು ತಿಳಿಸಿದರೂ ನೇರವಾಗಿ ನೇಮಕಾತಿಸಿ ಪಾವತಿಸಿರುವುದು ಆಕ್ಷೇಪಿಸಿದೆ.
2. ಮಂಜೂರಾತಿ ಹುದ್ದೆಗಳಲ್ಲಿ ಖಾಲಿಯಾಗುವ ಹುದ್ದೆಗಳಿಗೆ ಹೊರಗುತ್ತಿಗೆ ಮೇಲೆ ನೇಮಿಸಿಕೊಳ್ಳುವ ಉದ್ದೇಶವಿದ್ದಲ್ಲಿ ವಿವರಗಳೊಂದಿಗೆ ಪ್ರಸ್ತಾವನೆ ಸಲ್ಲಿಸಿ ಆರ್ಥಿಕ ಇಲಾಖೆಯ ಅನುಮತಿ ಪಡೆಯಲು ತಿಳಿಸಿದೆ.

ಪ್ರಯುಕ್ತ ಈ ಮೇಲಿನ ಪ್ರಕರಣಕ್ಕೆ ಸ್ಪಷ್ಟೀಕರಣ ನೀಡುವವರೆಗೆ ಪಾವತಿಸಿದ **ಮೊತ್ತ ರೂ. 1,92,406/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ: 11 ದಿನಾಂಕ: 24-01-2022 ರಂದು ನೀಡಲಾಗಿದೆ.** ಸದರಿ ಕಂಡಿಕೆಗೆ ನೀಡಿರುವ ಉತ್ತರ ಸಮಂಜಸವಿಲ್ಲದ ಪ್ರಯುಕ್ತ ಕಂಡಿಕೆಯನ್ನು ಮುಂದುವರೆಸಿದೆ.

**10. ಬ್ಯಾಂಕ್ ಗ್ಯಾರಂಟಿ ನವೀಕರಿಸದೇ ಇರುವ ಬಗ್ಗೆ.**

Indent ಸಂಖ್ಯೆ: 434 Metaling to Ayacut road from Kotageri Laxman field to Tekkalkot Udogha main road ಕಾಮಗಾರಿಗೆ ಸಂಬಂಧಿಸಿದಂತೆ ಗುತ್ತಿಗೆದಾರರಾದ ಶ್ರೀ ಸಂಬಾಶಿವರಾವ ಮುನಿರಾಬಾದರವರಿಂದ ಎಫ್.ಎಸ್.ಡಿ. ರೂ. 1,87,860/- ಗಳು ಮತ್ತು ಎ.ಪಿ.ಎಸ್. (ಡಿ.ಡಿ.) ರೂ.7,91,426/- ಗಳನ್ನು ಬ್ಯಾಂಕ್ ಗ್ಯಾರಂಟಿ. ರೂಪದಲ್ಲಿ ಪಡೆಯಲಾಗಿದೆ. ಆದರೆ ಸದರಿ ಎಫ್.ಡಿ.ಆರ್.ಗಳ ಚಲಾವಣಾ ಅವಧಿಯು ಕಾಮಗಾರಿ 19.10.2021 ಹಾಗೂ 19.04.2021 ಗಳೆಂದು ಮುಕ್ತಾಯವಾಗಿದ್ದು, ಸದರಿ ಬಿ.ಜೆ.ಗಳ ಚಲಾವಣಾ ಅವಧಿ ವಿಸ್ತರಿಸಿದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಒಂದು ಕಾಮಗಾರಿಗೆ ಪಡೆದ ಎ.ಪಿ.ಎಸ್. ಕಾಮಗಾರಿ ಮುಕ್ತಾಯವಾಗುವವರೆಗೆ ಹಾಗೂ ಒಂದು ಕಾಮಗಾರಿಗೆ ಪಡೆದ ಎಫ್.ಎಸ್.ಡಿ. ಕಾಮಗಾರಿ ಮುಕ್ತಾಯದ ನಂತರ ಒಂದು ವರ್ಷ ಅಥವಾ ಕಾಮಗಾರಿಯ Defects Liability Period ರವರೆಗೆ ಬಿಡುಗಡೆಗೊಳಿಸಬಾರದು/

ಡಿಡಿ ಇಟ್ಟುಕೊಳ್ಳಬೇಕು. ಆದರೆ ಸದರಿ ಕಾಮಗಾರಿಯು ಇನ್ನು ಮುಕ್ತಾಯವಾಗದೇ ಇರುವುದರಿಂದ ಗುತ್ತಿಗೆದಾರರಿಂದ ಪಡೆದ Bank Guarantee ಗಳು ಚಲಾವಣೆಯಲ್ಲಿ ಇರುವಂತೆ ನೋಡಿಕೊಳ್ಳುವುದು ಲೆಕ್ಕಪತ್ರ ಶಾಖೆಯ ಜವಾಬ್ದಾರಿಯಾಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ, ಸೂಕ್ತ ವಿವರಣೆ ಕೋರಿದೆ. ಅಲ್ಲಿಯವರೆಗೆ **ರೂ.9,79,286/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ: 12 ದಿನಾಂಕ: 24-01-2022 ರಂದು ನೀಡಲಾಗಿದೆ**. ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ಒಂದು ತಿಂಗಳ ಅವಧಿಯೊಳಗೆ ಪ್ರಸಕ್ತ ಬ್ಯಾಂಕ್ ಗ್ಯಾರಂಟಿಗಳನ್ನು ನವೀಕರಿಸುವಂತೆ ಕಾರ್ಯನಿರ್ವಾಹಕ ಅಭಿಯಂತರರು ತಾಂತ್ರಿಕ ವಿಭಾಗ ಇವರಿಗೆ ಮರಳಿಸಲಾಗಿದೆ ಎಂದು ತಿಳಿಸಿರುತ್ತಾರೆ. ಆದರೆ ನವೀಕರಣಗೊಂಡ ಬ್ಯಾಂಕ್ ಗ್ಯಾರಂಟಿಗಳನ್ನು ಲೆಕ್ಕಪರಿಶೋಧನೆಗೆ ಸಾದರಪಡಿಸದೇ ಇರುವುದರಿಂದ ಕಂಡಿಕೆಯನ್ನು ಮುಂದುವರೆಸಿದೆ.

**11. 2019-20ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ವಯ ಸ್ವೀಕೃತಿ ಮೊತ್ತಕ್ಕು ಲೆಕ್ಕಪರಿಶೋಧನೆಗೆ ಒದಗಿಸಿದ ದಾಖಲೆಗಳನ್ವಯ ಸ್ವೀಕೃತಿ ಮೊತ್ತಕ್ಕೂ ವ್ಯತ್ಯಾಸ ಕಂಡು ಬಂದಿರುವ ಕುರಿತು.**

ತುಂಗಭದ್ರಾ ಯೋಜನೆ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಮುನಿರಾಬಾದನಲ್ಲಿ 2019-20ನೇ ಸಾಲಿನಲ್ಲಿ ಪ್ರಾಪ್ತವಾದ ಸ್ವೀಕೃತಿಗಳ ವಿವರ **ಅನುಬಂಧ-05** ರಲ್ಲಿ ನೀಡಲಾಗಿದೆ. ಅದರಂತೆ ಒಟ್ಟು ಸ್ವೀಕೃತಿಗಳ ಮೊತ್ತ ರೂ.14,63,627/-ಗಳಷ್ಟಿರುತ್ತದೆ. ಆದರೆ ಲೆಕ್ಕಪರಿಶೋಧನೆಗೆ ರೂ.6,71,170/- ಗಳ ಸ್ವೀಕೃತಿ ಮೊತ್ತದ ದಾಖಲೆಗಳನ್ನು ಒದಗಿಸಲಾಗಿದ್ದು ಇನ್ನುಳಿದ ಮೊತ್ತ ರೂ.7,92,457/-ಗಳಿಗೆ ಯಾವುದೇ ದಾಖಲಾತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಪ್ರಯುಕ್ತ **ಅನುಬಂಧ-05** ರಲ್ಲಿ ತಿಳಿಸಿದಂತೆ ವ್ಯತ್ಯಾಸದ ಮೊತ್ತ **ರೂ.7,92,457/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ: 13 ದಿನಾಂಕ: 24-01-2022 ರಂದು ನೀಡಲಾಗಿದೆ.** ಸದರಿ ಕಂಡಿಕೆಗೆ ಯಾವುದೇ ಉತ್ತರವನ್ನು ನೀಡದೇ ಇರುವ ಪ್ರಯುಕ್ತ ಕಂಡಿಕೆಯನ್ನು ಮುಂದುವರೆಸಲಾಗಿದೆ.

**12. ಟೆಂಡರ್ ತಪ್ಪಿಸಲು ಬಿಲ್‌ಗಳನ್ನು ವಿಂಗಡಿಸಿ ದರಪಟ್ಟಿ ಮುಖಾಂತರ ಸಾಮಗ್ರಿಗಳನ್ನು ಖರೀದಿಸಿರುವ ಬಗ್ಗೆ.**

ತುಂಗಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಮುನಿರಾಬಾದನ 2019-20ನೇ ಸಾಲಿನ ಜನರಲ್ ವೋಚರ್ ಪರಿಶೀಲಿಸಿದಾಗ, 2018-19ನೇ ಸಾಲಿನ (150) ವಾರ್ಷಿಕ ವರದಿ ಪುಸ್ತಕಗಳನ್ನು ತಯಾರಿಸಲು M/S Sangamesh Enterprises ರವರಿಗೆ ಟೆಂಡರ್

ಕರೆಯದೇ ದರಪಟ್ಟಿ ಮುಖಾಂತರ ಒಟ್ಟು ರೂ. 2,62,186/- ಪಾವತಿ ಮಾಡಲಾಗಿದೆ. ವಿವರ ಈ ಕೆಳಗಿನಂತಿವೆ.

| ಕ್ರ.ಸಂ. | ಏಜೆನ್ಸಿ | ವೋಚರ್ ನಂಬರ್ | Bill No./Date | Amount |
|---|---|---|---|---|
| 01 | ಶ್ರೀ ಸಂಗಮೇಶ ಎಂಟರ್ ಪ್ರೈಸಸ್ | 598 | 90/28.06.2019 | 75,600 |
| 02 | ಶ್ರೀ ಸಂಗಮೇಶ ಎಂಟರ್ ಪ್ರೈಸಸ್ | 599 | 91/02.07.2019 | 75,600 |
| 03 | ಶ್ರೀ ಸಂಗಮೇಶ ಎಂಟರ್ ಪ್ರೈಸಸ್ | 600 | 92/10.07.2019 | 75,600 |
| 04 | ಶ್ರೀ ಸಂಗಮೇಶ ಎಂಟರ್ ಪ್ರೈಸಸ್ | 601 | 93/25.07.2019 | 35,386 |
| | | | **ಒಟ್ಟು** | **2,62,186** |

ಸದರಿ ಮೇಲಿನ ಪ್ರಕರಣವನ್ನು ಪರಿಶೀಲಿಸಿದಾಗ ಕರ್ನಾಟಕ ಸಾರ್ವಜನಿಕ ಅಧಿನಿಯಮ 1999 ರ ಕಲಂ 5ರ ಪ್ರಕಾರ ರೂಪಾಯಿ ಒಂದು ಲಕ್ಷಕ್ಕಿಂತ ಹೆಚ್ಚಿನ ಮೌಲ್ಯದ ಸಾಮಗ್ರಿ ಖರೀದಿಗೆ ಕಡ್ಡಾಯವಾಗಿ ಟೆಂಡರ್ ಪ್ರಕ್ರಿಯೆಯನ್ನು ಕೈಗೊಂಡು ಖರೀದಿಸಬೇಕಾಗಿರುತ್ತದೆ. ಆದರೆ ಈ ಮೇಲಿನ ಪ್ರಕರಣದಲ್ಲಿ ಉದ್ದೇಶಪೂರಕವಾಗಿ ಟೆಂಡರ್ ಕರೆಯುವುದನ್ನು ತಪ್ಪಿಸಲು ಒಂದೇ ಏಜೆನ್ಸಿಯಿಂದ ಒಂದೇ ದರಪಟ್ಟಿ ಮುಖಾಂತರ ಒಟ್ಟು ನಾಲ್ಕು ಬಾರಿ ಒಂದೇ ತರಹದ ಸಾಮಾಗ್ರಿಗಳನ್ನು ಖರೀದಿಸಿ ಈ ಮೇಲಿನ ನಿಯಮವನ್ನು ಉಲ್ಲಂಘಿಸಲಾಗಿದೆ. ಸದರಿ ಪ್ರಕರಣಕ್ಕೆ ಸ್ಪಷ್ಟೀಕರಣ ನೀಡುವವರೆಗೆ ಪಾವತಿಯಾದ ಒಟ್ಟು ಮೊತ್ತ **ರೂ.2,62,186/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ: 14 ದಿನಾಂಕ: 24-01-2022 ರಂದು ನೀಡಲಾಗಿದೆ.** ಸದರಿ ಕಂಡಿಕೆಗೆ ಯಾವುದೇ ಉತ್ತರವನ್ನು ನೀಡದೇ ಇರುವ ಪ್ರಯುಕ್ತ ಕಂಡಿಕೆಯನ್ನು ಮುಂದುವರೆಸಲಾಗಿದೆ.

**13. ಕಾಮಗಾರಿ ಮುಕ್ತಾಯವಾಗುವ ಮುಂಚೆಯೇ Additional Performance Security ((Difference D.D) ಬಿಡುಗಡೆಗೊಳಿಸಿರುವ ಬಗ್ಗೆ.**

2020-21ನೇ ಸಾಲಿನಲ್ಲಿ ಕಾಡಾ-ಟಿ.ಬಿ.ಪಿ.ವಿಭಾಗ ಮುನಿರಾಬಾದ ಅಡಿ ಕೈಗೆತ್ತಿಕೊಂಡು ಕಾಮಗಾರಿಗಳಲ್ಲಿ ಯಶಸ್ವಿ ಗುತ್ತಿಗೆದಾರರಿಂದ ಪಡೆದ Differential amount/Additional Performance Security ಹಣವನ್ನು ಕಾಮಗಾರಿ ಮುಕ್ತಾಯವಾದ ಬಗ್ಗೆ ಸೂಕ್ತ ದೃಡೀಕರಣ ಇಲ್ಲದೇ ಬಿಡುಗಡೆ ಮಾಡಿರುವುದು ಗಮನಿಸಿದೆ. (ವಿವರ **ಅನುಬಂಧ-06ರಲ್ಲಿ** ಲಗತ್ತಿಸಿದೆ.)

ಟೆಂಡರ್ ನಿಯಮಾವಳಿಗಳನ್ವಯ ಒಂದು ಟೆಂಡರ್‌ನಲ್ಲಿ ಭಾಗವಹಿಸಬೇಕಾದರೆ ಪ್ರತಿಯೊಬ್ಬ ಗುತ್ತಿಗೆದಾರನು ಇ.ಎಮ್.ಡಿ. ಹಣ ಕಟ್ಟಬೇಕು. ಭಾಗವಹಿಸಿದ ಗುತ್ತಿಗೆದಾರರಲ್ಲಿ

12

ಯಶಸ್ವಿಯಾದ ಗುತ್ತಿಗೆದಾರನನ್ನು ಹೊರತುಪಡಿಸಿ ಇತರೆ ಎಲ್ಲಾ ಗುತ್ತಿಗೆದಾರರ ಇ.ಎಮ್.ಡಿ. ಹಣವನ್ನು ಕೂಡಲೇ ಬಿಡುಗಡೆಗೊಳಿಸಬಹುದಾಗಿದೆ. ಯಶಸ್ವಿಯಾದ ಗುತ್ತಿಗೆದಾರನು 5% ಭದ್ರತಾ ಠೇವಣಿ ಹಣ ಮತ್ತು ಟೆಂಡರಿಗಿಟ್ಟ ಅಂದಾಜು ಮೊತ್ತಕ್ಕಿಂತ ಕಡಿಮೆ ಮೊತ್ತವನ್ನು ಟೆಂಡರಿನಲ್ಲಿ ಸೂಚಿಸಿದ್ದಲ್ಲಿ, ವ್ಯತ್ಯಾಸದ ಮೊತ್ತ ಅಂದರೆ Differential amount/ Additional Peroformance Secutiy ಹಣ ತುಂಬಿದ ಮೇಲೆ ಕರಾರು ಒಪ್ಪಂದ ಮಾಡಿ ಇ.ಎಮ್.ಡಿ. ಹಣ ಬಿಡುಗಡೆಗೊಳಿಸಬಹುದು.

ಈ ರೀತಿ ಪಡೆದ ಎಫ್.ಎಸ್.ಡಿ. ಹಣವನ್ನು ಕಾಮಗಾರಿ ಮುಕ್ತಾಯದ ನಂತರ ಒಂದು ವರ್ಷ ಅಥವಾ Defects Liability Period ಮುಗಿದ ಒಂದು ತಿಂಗಳ ನಂತರ ಬಿಡುಗಡೆಗೊಳಿಸಬಹುದಾಗಿದೆ. ಸದರಿ ಎಫ್.ಎಸ್.ಡಿ. ಹಣ ಬಿಡುಗಡೆಗೊಳಿಸಲು ಕಾಮಗಾರಿ ಮುಕ್ತಾಯದ ಪ್ರಮಾಣ ಪತ್ರ, ಅಂತಿಮ ಬಿಲ್ಲು ಪಾವತಿಯಾದ ದಾಖಲೆ ಹಾಗೂ Defects Liability Period ನಲ್ಲಿ ಗುತ್ತಿಗೆದಾರನು ಸದರಿ ಕಾಮಗಾರಿಯನ್ನು ಸುಸ್ಥಿತಿಯಲ್ಲಿ ನಿರ್ವಹಿಸಿದ ಬಗ್ಗೆ ಸೂಕ್ತ ದೃಡೀಕರಣ ಪಡೆಯಬೇಕು.

ಅದೇ ರೀತಿ ಎ.ಪಿ.ಎಸ್. ಬಿಡುಗಡೆ ಮಾಡಲು ಕಾಮಗಾರಿ ಮುಕ್ತಾಯವಾಗಿರಬೇಕು. ಕಾಮಗಾರಿ ಮುಕ್ತಾಯದ ಕುರಿತು ಸೂಕ್ತ ದೃಢೀಕರಣ ಪತ್ರ ಅಂದರೆ ಕಾಮಗಾರಿ ಮುಕ್ತಾಯ ಪ್ರಮಾಣ ಪತ್ರ ಇರಬೇಕು. ಆದರೆ ಟಿ.ಬಿ.ಪಿ.ಕಾಡಾ ಮುನಿರಾಬಾದನಲ್ಲಿ **ಅನುಬಂಧ-06ರಲ್ಲಿ** ವಿವರಿಸಿದಂತೆ ಒಟ್ಟು 37 ಕಾಮಗಾರಿಗಳಲ್ಲಿ ಕಾಮಗಾರಿಯು ಮುಕ್ತಾಯ ಹಂತದಲ್ಲಿರುತ್ತದೆ ಹಾಗೂ ವ್ಯತ್ಯಾಸದ ಮೊತ್ತ ಬಿಡುಗಡೆ ಮಾಡಲು ಸಹಾಯಕ ಕಾರ್ಯಪಾಲಕ ಅಭಿಯಂತರರು ಶಿಫಾರಸ್ಸು ಮಾಡಿರುತ್ತಾರೆಂದು ತಿಳಿಸುತ್ತಾ, ಕಾರ್ಯಪಾಲಕ ಅಭಿಯಂತರರು ಮುಖ್ಯ ಲೆಕ್ಕಾಧಿಕಾರಿಗಳಿಗೆ ಶಿಫಾರಸ್ಸು ಮಾಡಿದ್ದು ಈ ಶಿಫಾರಸ್ಸನ್ನು ಆಧರಿಸಿ ಮುಖ್ಯ ಲೆಕ್ಕಾಧಿಕಾರಿಗಳು ಪಡೆದ ಎಲ್ಲಾ ಎ.ಪಿ.ಎಸ್. ಹಣವನ್ನು ಬಿಡುಗಡೆಗೊಳಿಸಿರುತ್ತಾರೆ.

ಈ ರೀತಿ ಕಾಮಗಾರಿ ಮುಕ್ತಾಯದ ಕುರಿತು ಸೂಕ್ತ ಪ್ರಮಾಣ ಪತ್ರಗಳಿಲ್ಲದೇ Additional Performance Secutiy ಬಿಡುಗಡೆಗೊಳಿಸಲು ಬರುವುದಿಲ್ಲವೆಂದು ಲೆಕ್ಕಪರಿಶೋಧನೆಯಲ್ಲಿ ಅಭಿಪ್ರಾಯಪಟ್ಟಿದೆ. ಕಾರಣ ಈ ಕುರಿತು ನಿಯಮಗಳಲ್ಲಿ ಸೂಕ್ತ ಅವಕಾಶಗಳಿದ್ದರೆ ಸೂಕ್ತ ಮಾರ್ಗಸೂಚಿಗಳು ಬಂದಿದ್ದರೆ ಅದರ ಪ್ರತಿಯನ್ನು ಲೆಕ್ಕಪರಿಶೋಧನೆಗೆ ಒದಗಿಸಲು ತಿಳಿಸಿದೆ. ಅಲ್ಲಿಯವರೆಗೆ ನಿಯಮಗಳಲ್ಲಿ ಅವಕಾಶವಿಲ್ಲದೆ ಬಿಡುಗಡೆ ಮಾಡಿದ **ಹಣ ರೂ. 2,47,56,493/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ: 15 ದಿನಾಂಕ:24-01-2022 ರಂದು ನೀಡಲಾಗಿದೆ.** ಸದರಿ ಕಂಡಿಕೆಗೆ

ಉತ್ತರ ನೀಡುತ್ತಾ ಸಂಬಂಧಪಟ್ಟ ಸಹಾಯಕ ಕಾರ್ಯ ಪಾಲಕ ಅಭಿಯಂತರರು ಇವರ ಲಿಖಿತ ಹೇಳಿಕೆಯ ಪ್ರಕಾರ ಪಾವತಿಗೆ ಕ್ರಮವಹಿಸಲಾಗಿದೆ ಎಂದು, ಎಲ್ಲಾ ಕಾಮಗಾರಿಗಳ ಬಿಲ್ಲುಗಳ ಪಾವತಿಯ ಸಂಧರ್ಭದಲ್ಲಿ ಕಾಮಗಾರಿ ಮುಕ್ತಾಯ ಪ್ರಮಾಣ ಪತ್ರ ಹಾಗೂ ಇನ್ನಿತರ ಪ್ರಮಾಣ ಪತ್ರಗಳನ್ನು ನಿಯಮಾನುಸಾರ ಪಡೆದು ಪಾವತಿಸಲಾಗಿದೆ ಎಂದು, ಕೆಲವು ಪ್ರಕರಣಗಳನ್ನು ಹೊರತು ಪಡಿಸಿ ಕಾಮಗಾರಿ ಮುಕ್ತಾಯವಾದ ನಂತರವೇ ಎ.ಪಿ.ಎಸ್. ಹಣವನ್ನು ಪಾವತಿಸಲಾಗಿದೆ ಎಂದು ಅನುಪಾಲನೆಯನ್ನು ಸಲ್ಲಿಸಿರುತ್ತಾರೆ. ಆದರೆ ಇಲ್ಲಿ ಕೆಲವು ಪ್ರಕರಣಗಳನ್ನು ಹೊರತು ಪಡಿಸಿ ಇನ್ನಿತರ ಕಾಮಗಾರಿಗಳಿಗೆ ಕಾಮಗಾರಿ ಮುಕ್ತಾಯವಾದ ನಂತರವೇ ಎ.ಪಿ.ಎಸ್. ಹಣವನ್ನು ಪಾವತಿಸಲಾಗಿದೆ ಎಂದು ತಿಳಿಸಿ ಸದರಿ ಪ್ರಾಧಿಕಾರದವರೆ ತಪ್ಪು ಒಪ್ಪಿಕೊಂಡಿರುವ ಪ್ರಯುಕ್ತ ಕಂಡಿಕೆಯನ್ನು ಮುಂದುವರಿಸಿದೆ.

**14. ಸೂಕ್ತ ಕಾರಣಗಳಿಲ್ಲದೇ ಅಲ್ಪಾವಧಿ ಟೆಂಡರ್ ಕರೆದಿರುವ ಕುರಿತು.**

2019-20ನೇ ಸಾಲಿನಲ್ಲಿ ಈ ಕೆಳಗಿನ ತಖ್ತೆಯಲ್ಲಿ ವಿವರಿಸಿರುವಂತೆ ಅಲ್ಪಾವಧಿ ಟೆಂಡರ್ ಕರೆದಿರುವುದು ಗಮನಿಸಿದೆ.

| ಕ್ರ.ಸಂ | ಕಾಮಗಾರಿಗಳ ಸಂಖ್ಯೆ | ಟೆಂಡರ್‌ಗಿರುವ ಅಂದಾಜು ಮೊತ್ತ | ಎಲ್.ಡಿ.ಓ ರವರ ಪತ್ರ ಸಂಖ್ಯೆ | ಕಾಲವಧಿ |
|---|---|---|---|---|
| 1. | 6 | 92,79,307 | 22/1.2.2020 | 10 ದಿನಗಳು |
| 2. | 7 | 1,86,08,702 | 13.02.2020 | 10 ದಿನಗಳು |
| 3. | 2 | 70,78,239 | 10.03.2020 | 07 ದಿನಗಳು |
| | | **3,49,66,248** | | |

ಈ ಸಂಬಂಧ ಕೆ.ಟಿ.ಪಿ.ಪಿ ನಿಯಮಗಳ 2000 ರ ನಿಯಮ 17 (2) ರಲ್ಲಿ " Any reduction in the time stipulated under Sub-rule (1) has to be specifically authorised by an authority Superior to the Tender Inviting Authority for reasons to be recorded in writing" ಎಂದು ತಿಳಿಸಿದ್ದು, ಈ ಮೇಲಿನ ಪ್ರಕರಣಗಳಲ್ಲಿ ಭೂ ಅಭಿವೃದ್ಧಿ ಅಧಿಕಾರಿಗಳು (ತಾಂತ್ರಿಕ) ಕಾಡಾ ಟಿ.ಬಿ.ಪಿ. ಮುನಿರಾಬಾದರವರು ಅಲ್ಪಾವಧಿ ಟೆಂಡರ ಕರೆಯಲು ಲಿಖಿತ ರೂಪದಲ್ಲಿ ಆದೇಶ ನೀಡಿದ್ದರೂ ಸಹಾ ನಿಯಮದಲ್ಲಿ ತಿಳಿಸಿರುವಂತೆ ಸೂಕ್ತ ಕಾರಣಗಳನ್ನು ನೀಡಿರುವುದಿಲ್ಲ.

ಈ ರೀತಿ ಯಾವುದೇ ಕಾರಣಗಳಿಲ್ಲದೇ ಅಲ್ಪಾವಧಿ ಟೆಂಡರ್ ಕರೆಯಲು ಅನುಮತಿ ನೀಡಿ ಕೆ.ಟಿ.ಪಿ.ಪಿ. ನಿಯಮಗಳನ್ನು ಉಲ್ಲಂಘಿಸಲಾಗಿದೆ ಎಂದು ಲೆಕ್ಕಪರಿಶೋಧನೆಯಲ್ಲಿ ಅಭಿಪ್ರಾಯ ಪಡೆಯಲಾಗಿದೆ. ಈ ಕುರಿತು ಸೂಕ್ತ ವಿವರಣೆ ನೀಡುವವರೆಗೆ **ರೂ. 3,49,66,248/- ಆಕ್ಷೇಪಣೆಯಲ್ಲಿಡಲಾಗಿದೆ. ಈ ಕುರಿತು ಲೆಕ್ಕಪರಿಶೋಧನೆ ವಿಚಾರಣೆ ಪತ್ರ**

**ಸಂಖ್ಯೆ: 17 ದಿನಾಂಕ: 25-01-2022 ರಂದು ನೀಡಲಾಗಿದೆ.** ಸದರಿ ಕಂಡಿಕೆಗೆ ಉತ್ತರ ನೀಡುತ್ತಾ ಅಲ್ಪಾವಧಿ ಟೆಂಡರ್ ಕರೆಯಲು ಪ್ರಾಧಿಕಾರದ ಆಡಳಿತಾಧಿಕಾರಿಗಳಿಂದ ಲಿಖಿತ ರೂಪದಲ್ಲಿ ಅನುಮತಿಯನ್ನು ಪಡೆದು ಟೆಂಡರ್ ಪ್ರಕ್ರೀಯೆಯನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿರುತ್ತಾರೆ. ಆದರೆ ಇದಕ್ಕೆ ಸಂಬಂಧಿಸಿದ ಯಾವುದೇ ಪ್ರತಿಗಳನ್ನು ಲೆಕ್ಕಪರಿಶೋಧನೆಗೆ ಒದಗಿಸದೇ ಇರುವುದರಿಂದ ನೀಡಿರುವ ಉತ್ತರವನ್ನು ಮಾನ್ಯ ಮಾಡದೇ ಕಂಡಿಕೆಯನ್ನು ಮುಂದುವರೆಸಿದೆ.

**15. ನೂತನ ಪಿಂಚಣಿ ಪದ್ಧತಿ (ಎನ್.ಪಿ.ಎಸ್.) ಯನ್ನು ಸರ್ಕಾರದ ಆದೇಶಗಳನ್ವಯ/ ಮಾರ್ಗಸೂಚಿಗಳನ್ವಯ ಅನುಷ್ಠಾನಗೊಳಸದಿರುವ ಬಗ್ಗೆ.**

ಉಲ್ಲೇಖ:- 1. ಸರ್ಕಾರದ ಆದೇಶ ಸಂ. ಎಫ್.ಡಿ.(ಎಸ್.ಪಿ.ಎಲ್) 04 PET 2005 Bangalore Date:31.03.2006.
2. ಸರ್ಕಾರದ ಆದೇಶ ಸಂ. ಆಇ.03.ಸೇನಿಸೇ 2010 ಬೆಂಗಳೂರು ದಿನಾಂಕ:12.10.2010.
3. ಸರ್ಕಾರದ ಆದೇಶ ಸಂ. ಎಫ್.ಡಿ (ಎಸ್.ಪಿ.ಎಲ್) 2019 PEN 2012. Bangalore Date. 31.01.2014.
4. ಸರ್ಕಾರದ ಸುತ್ತೋಲೆ ಸಂಖ್ಯೆ: FD (SPL) 209 PEN 2012 (P) Bangalore Date.27.04.2016.
5. ಸರ್ಕಾರದ ಆದೇಶ ಸಂ.ಆಇ.37 ಕಇಓ 2019 ಬೆಂಗಳೂರು. ದಿನಾಂಕ:31.08.2019.

ಉಲ್ಲೇಖಿತ (01) ರ ಸರ್ಕಾರದ ಆದೇಶದನ್ವಯ ರಾಜ್ಯ ಸರ್ಕಾರದ ಸೇವೆಗೆ ದಿನಾಂಕ: 01.04.2006 ರಂದು ಅಥವಾ ತರುವಾಯ ಸೇರುವ ಎಲ್ಲಾ ನೇಮಕಾತಿದಾರರಿಗೆ ಕಡ್ಡಾಯಗೊಳ್ಳುವಂತೆ ಸರ್ಕಾರಿ ನೌಕರನು ಮೂಲ ವೇತನ ಮತ್ತು ಅದರ ಮೇಲೆ ಲಭ್ಯವಾಗುವ ತುಟ್ಟಿ ಭತ್ಯೆಯ ಶೇ.10 ರಷ್ಟನ್ನು ಕೊಡುಗೆಯಾಗಿ ವಂತಿಗೆಯನ್ನು ನೀಡಬೇಕಾಗುತ್ತದೆ.

ಉಲ್ಲೇಖಿತ (05) ರ ಸರ್ಕಾರದ ಆದೇಶದನ್ವಯ ಕಾಡಾ ಪ್ರಾಧಿಕಾರದ ಎಲ್ಲಾ ಎನ್.ಪಿ.ಎಸ್. ಅಧಿಕಾರಿ/ನೌಕರಿಗೆ ಸರ್ಕಾರದ ವಂತಿಗೆಯನ್ನು ದಿನಾಂಕ: 01.04.2019 ರಿಂದ ಜಾರಿಗೆ ಬರುವಂತೆ ಶೇ.10 ರಿಂದ ಶೇ.14 ಕ್ಕೆ (ಮೂಲವೇತನ + ತುಟ್ಟಿಭತ್ಯೆ) ಹೆಚ್ಚಿಸಿ ಆದೇಶಿಸಿರುತ್ತಾರೆ.

ಕಾಡಾ ಪ್ರಾಧಿಕಾರವು ಅಷ್ಟೆ ಮೊತ್ತದ ವಂತಿಗೆಯನ್ನು ನೀಡಬೇಕು. ಸರ್ಕಾರದ ಆದೇಶದನ್ವಯ ವಂತಿಗೆ ಮೊತ್ತ ನೀಡಿರುವ ಬಗ್ಗೆ ತಿಳಿದು ಬಂದಿರುವುದಿಲ್ಲ. ಉಲ್ಲೇಖಿತ (02)ರ ಸರ್ಕಾರದ ಆದೇಶದನ್ವಯ ಸರ್ಕಾರಿ ನೌಕರನು ಹಾಗೂ ಸರ್ಕಾರ/ಕಾಡಾ ಪ್ರಾಧಿಕಾರ ನೀಡುತ್ತಿರುವ ಕೊಡುಗೆ ಹಣವನ್ನು ಹೊಸ ವ್ಯಾಖ್ಯಾನಿಸಿದ ಕೊಡುಗೆ ಯೋಜನೆಯ

